ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ಜನಪದ ವಿಚಾರ

ಒಂದು ಮರದ ಸುತ್ತ

ಆಡಳಿತದ ಕೆಲಸ

ಐನ್‌ಸ್ಟೀನರ ಎರಡು ಪತ್ರಗಳು

ಗಂಗಾ ಕಾವೇರಿ ಯೋಜನೆ ಒಂದು ಮನವಿ

ಆಧುನಿಕ ಕೃಷಿಯಿಂದ ಸಾವಯುವ ಕೃಷಿಗೆ

ಸಾಹಿತ್ಯ ಮತ್ತು ಸಮಾಜ

ಸಂಪುಟ : ೧೧ ಫೆಬ್ರವರಿ ೧೯೯೧ ಸಂಚಿಕೆ : ೮

ಈ ಸಂಚಿಕೆಯಲ್ಲಿ

ನಿಮ್ಮೊಂದಿಗೆ	೧
ಒಂದು ಮರದ ಸುತ್ತ	೩
ಆಡಳಿತದ ಕೆಲಸ	೫
ಐನ್‌ಸ್ಟೀನರ ಎರಡು ಪತ್ರಗಳು	೮
ಗಂಗಾ ಕಾವೇರಿ ಯೋಜನೆ-ಒಂದು ಮನವಿ	೧೦
ಆಧುನಿಕ ಕೃಷಿಯಿಂದ ಸಾವಯುವ ಕೃಷಿಗೆ	೧೩
ಸಾಹಿತ್ಯ ಮತ್ತು ಸಮಾಜ	೧೭

ಜನಪದ ವಿಚಾರ

ಜನಪದ ಸೇವಾ ಟ್ರಸ್ಟ್, ಮೇಲುಕೋಟೆ-571 431

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ಜನಪದ ವಿಚಾರ

ಸಂಪುಟ: ೧೧; ಮೇಲುಕೋಟೆ. ಫೆಬ್ರುವರಿ ೧೫, ೧೯೯೧; ಸಂಚಿಕೆ ೮

ನಿಮ್ಮೊಂದಿಗೆ ....

ಯುದ್ಧ ಮುಂದುವರಿದಿದೆ. ತಾಂತ್ರಿಕ ಪ್ರಗತಿಯ ಸಾವಿನ ಅಸ್ತ್ರಗಳು ಮಿಂಚತೊಡಗಿವೆ. ಕಪ್ಪು ಟಾರಿನಂಥ ಎಣ್ಣೆ ಅಲೆಗಳಬ್ಬರದ ಸಮುದ್ರವನ್ನು ಜಿಗಿದು ಉಸಿರುಗಟ್ಟಿಸಿದೆ.

ಯುದ್ಧಕ್ಕೆ ನೈತಿಕ ಗುರಿಗಳಿದ್ದ ಕಾಲವಿತ್ತು. ಪ್ರಾಯಶಃ ಎಲ್ಲಾ ಯುದ್ಧಗಳಲ್ಲೂ ಇತ್ತಂಡಗಳೂ ನೈತಿಕ ನೆಲೆಗಾಗಿ ಪರದಾಡುತ್ತವೆ. ಈ ಯುದ್ಧ ಅಂತಹ ಎಲ್ಲ ಭ್ರಮೆಗಳನ್ನು ಹರಿದು ಹಾಕಿದೆ. ಒರಟು ಅಧಿಕಾರ ಲಾಲಸೆ–ಕೊಂಚ ನವಿರಾದ ವ್ಯಾಪಾರೀ ಕಪಿಮುಷ್ಠಿಗಳ ನಡುವಿನ ಲಡಾಯಿ ಇದು. ನಮ್ಮ ಸ್ವಾರ್ಥದ ಅಳತೆಗೋಲಾಗಿ ಈ ಯುದ್ಧ ಪರಿಣಮಿಸಿದೆ. ನಿಮ್ಮ ಅಗತ್ಯಕ್ಕೆ ತಕ್ಕಂತೆ ಭಾಗವಹಿಸುವುದು; ಭಾಗವಹಿಸದಿರುವುದು ನಡೆದಿದೆ.

ಯುದ್ಧದ ಭೀಭತ್ಸವೂ ತಟ್ಟದ ಸ್ಥಿತಿ ಇದೆ. ಯುದ್ಧವೂ ಒಂದು ಕ್ರಿಕೆಟಿನಂಥಾ ಒಂದು ಆಟ ಎಂಬ ಧೋರಣೆಯನ್ನು ಟಿವಿಯಂಥಾ ಸಮೂಹ ಜಾಲ ಸೃಷ್ಟಿಸಿದೆ. 'ರಿಲೇ ಚೆನ್ನಾಗಿಲ್ಲ' ಎಂದು ನನ್ನಲ್ಲಿ ಒಬ್ಬ ಗೊಣಗಿದ್ದು ಇನ್ನೂ ಹಸಿರಾಗಿದೆ.

ಇವೆಲ್ಲವುಗಳ ಮಧ್ಯೆ ಸಾವಿನ ಭೀತಿಯಲ್ಲಿರುವ ಯೋಧ, ರೆಕ್ಕೆ ಬಿಡಿಸಲಾಗದೇ ಒದ್ದಾಡುವ ಹಕ್ಕಿಗಳು, ಹಾಲಿನ ಡಬ್ಬವೂ ಸಿಗದೇ ಹುಚ್ಚೆದ್ದ ತಾಯಿ – ಕೇವಲ ಚಿತ್ರಗಳಷ್ಟೇ ಆಗಿ ಬಿಟ್ಟಿದ್ದಾವೆ.

ಯುದ್ಧದ ಶಕ್ತಿಯೇ ವಿಚಿತ್ರವಾದದ್ದು – ಅದು ಮನುಷ್ಯನ ಎಲ್ಲಾ ಪ್ರವೃತ್ತಿಗಳನ್ನು ಹೊರಗೆಳೆಯುತ್ತದೆ. ಲಾಲಸೆ, ಶೌರ್ಯ, ಕ್ರೌರ್ಯ, ಕರುಣೆ, ವಿಷಾದ – ಹೀಗೆ; ಈ ಪ್ರತಿಕ್ರಿಯೆಗಳಿಗೆ ಶಕ್ತ ಚೌಕಟ್ಟನ್ನು ಯುದ್ಧ ಒದಗಿಸುತ್ತದೆ.

ಯಾವುದೇ ದುರಂತವೂ ಮನುಷ್ಯನಲ್ಲಿ ಗಾಢ ತುಮುಲಗಳನ್ನೆಬ್ಬಿಸಬೇಕು. ಸಾವಿನ ಭಯ ಅಲ್ಲ ಅದು. ಅಸ್ತಿತ್ವದ ಅರ್ಥವನ್ನು ಶೋಧಿಸುವ ಒತ್ತಡ. ಇದಕ್ಕೆ ಯುದ್ಧವೇ ನಡೆಯಬೇಕಾಗಿಲ್ಲ. ಒಂದು ನೋವು ಈ ಒತ್ತಡವನ್ನು ಪ್ರಕಾಶಿಸಬಲ್ಲದು.

ನಮ್ಮ ದುರಂತವಿರುವುದು ಇಲ್ಲೇ. ನೂರು ಜೀವಗಳು ಕೋಮು ವೈಷಮ್ಯಕ್ಕೆ ಬಲಿಯಾದಾಗಲೂ ಅದು ನಮ್ಮಲ್ಲಿ ಕರುಣೆಯುಕ್ಕಿಸುವುದಿಲ್ಲ. ನೂರು ಭ್ರಷ್ಟಾಚಾರ

ಗಳು ನಡೆದಾಗಲೂ ಅದು ನಮ್ಮ ಸಿಟ್ಟನ್ನು ಕೆರಳಿಸುವುದಿಲ್ಲ. ನೂರು ಮರಗಳು ಉರುಳಿದಾಗಲೂ ಭಯ ಹುಟ್ಟಿಸುವುದಿಲ್ಲ, ಇಂದಿನ ಬದುಕನ್ನು ನಾಳೆಗೆ ತಳ್ಳುವುದೇ ಬಹು ದೊಡ್ಡ ಸೃಜನ ಶೀಲ ಘಟನೆಯೆನಿಸಿದೆ.

ನಮ್ಮ ಆರ್ಥಿಕ ದುಸ್ಥಿತಿ, ಕೆಡುತ್ತಿರುವ ನೀರು, ನೆಲ, ಹೆಚ್ಚುತ್ತಿರುವ ಹಿಂಸೆ, ಭ್ರಷ್ಟಾಚಾರ–ಇವೆಲ್ಲ ನಮ್ಮದೇ ಹೃದಯದೊಳಗಿಂದ ಅರಳಿದಂತಿದೆ.

ಆರ್ಥರ್ ಮಿಲ್ಲರ್‌ನ ನಾಟಕವೊಂದರಲ್ಲಿ ಮಗ ಯುದ್ಧದಲ್ಲಿ ರಾಷ್ಟ್ರಕ್ಕಾಗಿ ಹೋರಾಡುತ್ತಿದ್ದರೆ, ಅಪ್ಪ ದೋಷಯುಕ್ತ ಯಂತ್ರಗಳನ್ನು ಸೈನ್ಯಕ್ಕೆ ಮಾರಿ ಲಕ್ಷವೆಣಿಸುತ್ತಿರುತ್ತಾನೆ. ಅಪ್ಪನ ಸ್ವಾರ್ಥಕ್ಕೆ ಹೇಸಿ ಮಗ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. ಆ ಸಾವೂ ವಿಹ್ವಲತೆಯದ್ದೇ. ಏನನ್ನೋ ತಡೆಯಲಾರದ ಭಗ್ನ ಸಿಟ್ಟು ಅಕ್ಷರಶಃ ಆತ್ಮಹತ್ಯಾಕಾರಿಯಾಗುತ್ತದೆ. ಅದರ ನೈತಿಕ ಸಿಟ್ಟೋ ಕೇವಲ ಸಡಿಲಗೊಳ್ಳಲೆಂದೇ ಬಿಗಿದ ಮುಷ್ಠಿ.

ನಮ್ಮೆಲ್ಲರ ಬದುಕಿನಲ್ಲಿ ಈ ನೈತಿಕ ಪ್ರಶ್ನೆಗಳು ಜೀವ ಪಡೆಯುತ್ತಿಲ್ಲ. ಅಪ್ಪನ ಭ್ರಷ್ಟತೆಯಲ್ಲಿ ಲೋಲುಪನಾಗುವ ಮಗ, ಮಗನ ದುಡ್ಡು ಮಾಡುವ ಗುಣಕ್ಕೆ ಹೆಮ್ಮೆ ಪಡುವ ಅಪ್ಪ – ಹೀಗೆ ಭ್ರಷ್ಟತೆಯೇ ಅಪ್ಯಾಯಮಾನವಾಗಿರುವುದು ನಮಗೆ ಕಾಣಿಸದ ಸತ್ಯವೇನಲ್ಲ.

ಯಾವ ಯುದ್ಧವನ್ನೂ ಯಾರೂ ನಿಲ್ಲಿಸಲ್ಲ; ಅದು ತನ್ನಿಂದ ತಾನೇ ಅಂತ್ಯವಾಗುತ್ತದೆ. ಈ ಅಂತ್ಯ ನಾಟಕೀಯವಾಗಿರುವುದಿಲ್ಲ. ಹೊಗೆ, ಬೆಂಕಿ, ನಾರುವ ಹೆಣಗಳ ಜೊತೆ ಬದುಕು ಕಟ್ಟುವ ಧೈರ್ಯವನ್ನು ಇದು ಹೊಸಕಿ ಹಾಕಬಹುದು. ಎಲ್ಲ ಯುದ್ಧಗಳ ತಾಯಿ ಎಂಬ ಪದಪುಂಜವೇ ನಮ್ಮ ಕಾಲದ ವ್ಯಂಗ್ಯಗಳಲ್ಲೊಂದು.

ಮಹಾಭಾರತದ ಘೋರ ಅಂತ್ಯದ ಬಳಿಕ ಆ ವಿಷಾದ, ಮಡುಗಟ್ಟಿದ ಶೋಕ, ದುರಂತದ ಪಾಪಪ್ರಜ್ಞೆ – ಒಟ್ಟಾರೆಯಾಗಿ ವ್ಯಾಸರನ್ನು ಕಾಡಿತ್ತು.

ಪಾಂಡು, ಧೃತರಾಷ್ಟ್ರರ ತಂದೆ ವ್ಯಾಸರಿಗೆ ತನ್ನ ಕಣ್ಣೆದುರೇ ಘಟಿಸಿದ ಪಾಶವೀ ಯುದ್ಧವನ್ನು ನಿಲ್ಲಿಸಲಾಗಲಿಲ್ಲ. ಜನಾಂಗದ ಗೌರವ, ಹಿರಿಮೆ, ಪಾಂಡಿತ್ಯ, ಎಲ್ಲವೂ ಆಗಿದ್ದ ವ್ಯಾಸರಲ್ಲಿ ಅದನ್ನೆಲ್ಲಾ ಮೀರಿದ ಒಂಟಿತನ, ವ್ಯಾಕುಲತೆ ತುಂಬಿಕೊಂಡಿತ್ತು. ತನ್ನ ಎಲ್ಲಾ ತುಮುಲಗಳನ್ನು ವ್ಯಾಸರು, ಸ್ವಗತದ ರೀತಿಯ ಗಟ್ಟಿದನಿಯಲ್ಲಿ ಹೊರಚೆಲ್ಲುತ್ತಾರೆ.

"ಎರಡೂ ಕೈಎತ್ತಿ ಕೂಗುತ್ತಿದ್ದೇನೆ. ಯಾರಿಗೂ ಕೇಳಿಸುತ್ತಿಲ್ಲ" ಶಸ್ತ್ರ ಶಾಸ್ತ್ರಗಳ ಪಾಂಡಿತ್ಯ, ದೊರೆತನದ ದಾನ, ರಕ್ಷಣೆಗಳ ಹಮ್ಮು, ಧರ್ಮ ಉಳಿಸುವ ಯುದ್ಧದ ಸಮರ್ಥನೆಗಳ ಟೊಳ್ಳುತನಕ್ಕೆ ಖಿನ್ನರಾದ ವ್ಯಾಸರು, "ಕಡೆಗೂ ಇಷ್ಟು ಸಾಕು, ಪರೋಪಕಾರವೇ ಪುಣ್ಯ, ಪರಪೀಡನೆಯೇ ಪಾಪ" ಎಂದು ಉದ್ಗರಿಸಿದರು.

ಕಾಲ ಚಲಿಸುತ್ತದೆ. ಮನುಷ್ಯ ಮತ್ತದೇ ರಕ್ತ – ಮಾಂಸದ ಮೂರ್ತಿ. ದ್ವಾಪರದ ಗರ್ವ, ದ್ವೇಷ, ಸೇಡು, ಹಿಂಸೆ ೨೦ನೇ ಶತಮಾನಕ್ಕೂ ದಾಟಿ ಬಂದಿದೆ ಅಲ್ಲಿ ಕಂಡ ಹಿಂಸೆ ಇಲ್ಲಿ ಹೆಡೆ ಎತ್ತಿದೆ. ★

– ಕೆ. ಪಿ. ಸುರೇಶ

ಒಂದು ಮರದ ಸುತ್ತ

— ಸುರೇಂದ್ರ ಕೌಲಗಿ

ಈ ದಿನ ಪೇಟೆ ಶ್ರೀ ಕೃಷ್ಣ ದೇವಸ್ಥಾನದ ಮುಂದಿರುವ ಅರಳಿ ಮರವನ್ನು ಕಡಿಯುವ ಬಗ್ಗೆ ಸ್ಥಳ ಪರಿಶೀಲನೆಗಾಗಿ ತಾಲ್ಲೋಕಿನ ತಹಶೀಲ್ದಾರರು ಬಂದಿದ್ದರು. ಈ ಅರಳೀಮರ ಬಹಳ ಪುರಾತನವಾದುದು. ನನ್ನ ಅಂದಾಜಿನಂತೆ ಅದು ೧೦೦ ವರ್ಷಗಳಿಗಿಂತಲೂ ಹೆಚ್ಚು ವಯಸ್ಸಿನ ಮರವಾಗಿರಬಹುದು. ನಾನು ಅದನ್ನು ಕಳೆದ ೩೦ ವರ್ಷಗಳಿಂದ ನೋಡುತ್ತಿದ್ದೇನೆ. ಅದು ಅನೇಕ ಹಕ್ಕಿಗಳಿಗೆ ಆವಾಸ ಸ್ಥಾನವೂ ಆಗಿದೆ. ಋತುಮಾನಗಳಿಗನುಸಾರವಾಗಿ ಅದು ತನ್ನ ಎಲೆಗಳನ್ನು ಕಳಚಿ ಹೊಸ ಎಲೆಗಳನ್ನು ಪಡೆಯುತ್ತಾ ಬಂದಿರುವುದನ್ನು ನಾನು ಆನಂದಿಸುತ್ತಾ ಬಂದಿದ್ದೇನೆ. ಆಶಾಢ ಮತ್ತು ಶ್ರಾವಣ ಮಾಸಗಳ ಬಿರುಸಾದ ಗಾಳಿಯಲ್ಲಿ ಅದು ಕೊಂಚವೂ ಅಲುಗಾಡದೆ ನಿಂತಿರುವುದನ್ನು ಕಂಡಿದ್ದೇನೆ. ಅದರ ದಟ್ಟ ಎಲೆಗಳ ಮೂಲಕ ಗಾಳಿ ಬೀಸಿದಾಗ ಆರ್ಭಟದ ಧ್ವನಿಯನ್ನು ಕೇಳಿದ್ದೇನೆ. ಅದರ ಎರಡು ದೊಡ್ಡ ಶಾಖೆಗಳ ಮಧ್ಯೆ ಒಂದು ದೊಡ್ಡ ಮುಳ್ಳಿನ ಪೊದೆಯೂ ಬೆಳೆದಿದೆ. ಆ ಪೊದೆಯೂ ಕೂಡ ನನಗೆ ತಿಳಿದ ಮಟ್ಟಿಗೆ ೩೦ ವರ್ಷಗಳಿಂದಲೂ ಇದೆ. ಇಂಥ ಈ ಮರವು, ನೋಡುವುದಕ್ಕೆ ಯಾವ ಅಪಾಯವೂ ಇಲ್ಲದಿರುವಂತೆ ಕಂಡು ಬರುತ್ತಿರುವಾಗ, ಆ ಮರದ ಅಕ್ಕ-ಪಕ್ಕದ ಮನೆಯವರು ಅದು ಬೀಳಬಹುದೆಂಬ ಭೀತಿಯನ್ನು ತಾಳಿ, ಅದನ್ನು ಕಡಿಯಬೇಕೆಂದು ಸ್ಥಳೀಯ ಮಂಡಲ ಪಂಚಾಯಿತಿಗೆ ಅರ್ಜಿಯನ್ನು ಸಲ್ಲಿಸಿದ್ದಾರೆ. ಆ ಮೇರೆಗೆ ಸುಮಾರು ಒಂದು ವರ್ಷದ ಹಿಂದೆ ಆ ಮರವನ್ನು ಊರಿನ ಶ್ರೀ ನಾರಾಯಣಸ್ವಾಮಿ ದೇವಸ್ಥಾನದ ಅಧಿಕಾರಿಗಳು ಹರಾಜು ಹಾಕುವುದಕ್ಕೆ ಬಂದರು. ಆ ದಿನವೇ ನನಗೆ ಮರವನ್ನು ಕಡಿಯಲಾಗುತ ದೆಂಬ ವಿಷಯ ಗೊತ್ತಾದುದು. ಆಗ ನಾನು ತಕ್ಷಣ ಉಪವಿಭಾಗಾಧಿಕಾರಿಗಳನ್ನು ದೂರವಾಣಿಯ ಮೂಲಕ ಸಂಪರ್ಕಿಸಿ ಆ ಮರವನ್ನು ಕಡಿಯುವುದು ಎಷ್ಟು ಅನಗತ್ಯ ಎಂಬುದನ್ನು ಅರಿಕೆ ಮಾಡಿಕೊಂಡೆ. ಅವರ ಸಲಹೆಯ ಮೇರೆಗೆ ಮರವನ್ನು ಕಡಿಯು ವುದರಿಂದ ತಡೆಯಬೇಕೆಂದು ಕೋರಿ ತಂತಿ ಮೂಲಕ ಅರ್ಜಿಯನ್ನು ಸಲ್ಲಿಸಿದೆ. ಉಪ-ವಿಭಾಗಾಧಿಕಾರಿಗಳು ನನ್ನ ಈ ಅರ್ಜಿಯ ಆಧಾರದ ಮೇಲೆ ಮರ ಕಡಿಯು

ವುದನ್ನು ತಾತ್ಕಾಲಿಕವಾಗಿ ತಡೆ ಹಿಡಿದರು ಮತ್ತು ಈ ಮರ ಕಡಿಯುವ ಮೊದಲು ಅದರ ವಯಸ್ಸು ಮತ್ತು ದುರ್ಬಲತೆಯ ಬಗ್ಗೆ ಅರಣ್ಯ ಇಲಾಖೆಯವರಿಂದ ವರದಿ ಪಡೆಯಬೇಕೆಂದು ದೇವಸ್ಥಾನದ ಪ್ರಧಾನಾಧಿಕಾರಿಯವರಿಗೆ ತಿಳಿಸಿದರು.

ಮುಂದೆ ಕೆಲ ತಿಂಗಳುಗಳ ನಂತರ ತಾಲ್ಲೋಕಿನ ತಹಶೀಲ್ದಾರರು ಅದೇ ವಿಷಯ ವಾಗಿ ಬಂದರು. ಊರಿನ ಅನೇಕ ಜನ ಮಹನೀಯರು ಸೇರಿದ್ದರು. ಮರ ಕಡಿಯ ಬೇಕೆಂದು ಯಾರು ಬಹಳ ಆಗ್ರಹ ಪಡಿಸುತ್ತಿದ್ದಾರೋ ಅವರು ಬಂದು ನನ್ನನ್ನು ಸಹ ಕರೆದರು. "ನೀವು ಅರಳೀಮರವನ್ನು ಕಡಿಯುವುದಕ್ಕೆ ವಿರೋಧ ಮಾಡು ತ್ತಿದ್ದೀರೆಂದು ಗೊತ್ತಾಯಿತು. ಆ ಮರ ತುಂಬ ಅಪಾಯದ ಸ್ಥಿತಿಯಲ್ಲಿದೆ. ಹೀಗಿರುವಾಗ ನೀವೇಕೆ ವಿರೋಧ ಮಾಡುತ್ತಿದ್ದೀರಿ?" ಎಂದು ಕೇಳಿದರು. ಆ ವ್ಯಕ್ತಿ ಬಹಳ ಆತುರ ಮತ್ತು ಮುಚ್ಚು ಮನಸ್ಸಿನವನಾಗಿದ್ದಾನೆಂದು ನನಗೆ ಕಂಡು ಬಂತು. ನಾನು ಅವರಿಗೆ ಹೇಳಿದೆ, ''ನನಗಂತೂ ಆ ಮರ ಬೀಳುತ್ತದೆಂದು ಅನಿಸುತ್ತಿಲ್ಲ.'' ಅವರು ತಮ್ಮ ಅಭಿಪ್ರಾಯವನ್ನೇ ಒತ್ತಿ ಹೇಳಿದರು. ಮುಂದೆ "ನೀವು ಬೇರೆ ಕಡೆಗೆ ಬೇರೆ ದೊಡ್ಡ ಮರಗಳನ್ನು ಕಡಿದಾಗ ಏಕೆ ಸುಮ್ಮನಿದ್ದೀರಿ. ಆಗ ಏಕೆ ತಕರಾರು ಮಾಡಲಿಲ್ಲ" ಎಂದು ಕೇಳಿದರು. ಅದಕ್ಕೆ ನಾನು ಹೇಳಿದೆ, "ಎಲ್ಲಿಯೇ, ಯಾರೇ ಆಗಲೀ, ಮರಗಳನ್ನು ಅನಗತ್ಯವಾಗಿ ಕಡಿಯುವುದು ತಪ್ಪು, ಬೇರೆ ಕಡೆ ಮರ ಕಡಿದಿದ್ದರೆ ಅದು ನನಗೆ ಗೊತ್ತಿಲ್ಲ" ಎಂದು ಹೇಳಿದೆ. ಅದಕ್ಕೆ ಅವರು, "ನೀವು ಸುಳ್ಳು ಹೇಳುತ್ತೀರಿ" ಎಂದು ನನ್ನನ್ನು ದೂರಿದರು. ನಂತರ ನಾವಿಬ್ಬರು ಅರಳೀಮರದ ಬಳಿ ಬಂದೆವು. ಅಲ್ಲಿ ಆಗಲೇ ೩೦–೪೦ ಜನ ಸೇರಿದ್ದರು. ತಹಶೀಲ್ದಾರರು ನನ್ನ ಅಭಿಪ್ರಾಯವೇನೆಂದು ಕೇಳಿದರು. ಈ ಮರವು ಯಾವುದೇ ದೃಷ್ಟಿಯಿಂದ ದುರ್ಬಲವಾಗಿಲ್ಲವೆಂದೂ, ಅದನ್ನು ಕಡಿಯುವ ಅಗತ್ಯವಿಲ್ಲವೆಂದೂ ಹೇಳಿದೆ. ಒಂದು ವೇಳೆ ನಿಮಗೆ ಅದು ದುರ್ಬಲವಾಗಿದೆ ಎಂದೂ ಮತ್ತು ಅದನ್ನು ಕಡಿಯುವುದು ಸರಿ ಎಂದೂ ಅನಿಸಿದರೆ ನಿಮ್ಮ ತೀರ್ಪನ್ನು ನಾನು ಒಪ್ಪುತ್ತೇನೆ ಎಂದು ಹೇಳಿದೆ. ಮಹಜರ್ ಮೇಲೆ ರುಜು ಮಾಡಿ ಎಂದು ಕೋರಿದರು. ನಾನು ಅದಕ್ಕೆ ಸಮ್ಮತಿಸಲಿಲ್ಲ. ಆ ವೇಳೆಗೆ ಅಲ್ಲಿಗೆ ತಾಲ್ಲೋಕಿನ ವಿಧಾನ ಸಭಾ ಸದಸ್ಯರು ಬಂದರು. ಅವರೂ ಕೂಡ ಮರ ಕಡಿಯಬೇಕೆಂದು ಅಭಿಪ್ರಾಯಪಟ್ಟರು. ನನ್ನ ಬಳಿಗೆ ಬಂದು ಮರದ ಅಭದ್ರತೆಗಿಂತ ಅದರ ಅಕ್ಕಪಕ್ಕ ಹಾವು ಮತ್ತು ಇತರ ಹುಳ–ಹುಪ್ಪಡಿಗಳ ಕಾಟವನ್ನು ತಪ್ಪಿಸಲಿಕ್ಕಾದರೂ ಅದನ್ನು ಕಡಿಯುವ ಅಗತ್ಯವಿದೆ ಎಂದು ಪ್ರಸ್ತಾಪಿಸಿದರು. ಆಗಲೂ ಸಹ ನನ್ನ ಅಭಿಪ್ರಾಯವನ್ನು ತಿಳಿಸಿದೆ. ಗುಂಪಿನಲ್ಲಿದ್ದ ಕೆಲವರು ತಮ್ಮ ಮನಸ್ಸಿಗೆ ತೋರಿದಂತೆ ಮಾತನಾಡುತ್ತಿದ್ದರು. ಒಬ್ಬ ಮಹಾನುಭಾವರು, "ನೀವೇ ಈ ಸುತ್ತಲಿನ ಮನೆಗಳೆಲ್ಲವನ್ನೂ ಖರೀದಿಸಿ ಬಿಡಿ. ಆಗ ಈ ಸಮಸ್ಯೆಯೇ ತಪ್ಪುತ್ತದೆ" ಎಂದು ವ್ಯಂಗ್ಯವಾಗಿ ನುಡಿದರು. ಆ ಗುಂಪಿ

೨೩ ನೇ ಪುಟ ನೋಡಿ

ಆಡಳಿತದ ಕೆಲಸ

– ಜೆ. ಸಿ. ಕುಮಾರಪ್ಪ

(ಜೆ.ಸಿ. ಕುಮಾರಪ್ಪ ಪಾಶ್ಚಿಮಾತ್ಯ ಅರ್ಥಶಾಸ್ತ್ರ ಓದಿ ನಂತರ ಗಾಂಧೀಜಿಯವರ ಪ್ರಭಾವಕ್ಕೆ ಒಳಗಾಗಿದ್ದ ಓರ್ವ ವಿಚಾರವಂತ ವ್ಯಕ್ತಿ. ಅವರು ಗಾಂಧೀಜಿಯವರ ವಿಚಾರಗಳಿಗೆ ಮುಖ್ಯವಾಗಿ, ಆರ್ಥಿಕ ವಿಚಾರಗಳಿಗೆ, ಒಂದು ಸ್ವರೂಪ ಕೊಟ್ಟರು. ಅದನ್ನು ಅವರು 'ಶಾಶ್ವತ ಅರ್ಥಶಾಸ್ತ್ರ' ಎಂದು ಕರೆದರು. ಈ ಅರ್ಥಶಾಸ್ತ್ರಕ್ಕೂ ಈಗ ಪ್ರಚಲಿತವಿರುವ ಅರ್ಥಶಾಸ್ತ್ರಕ್ಕೂ ಇರುವ ವ್ಯತ್ಯಾಸ ನಮಗೆ ತಿಳಿದರೆ ಅದರಿಂದ ಬಹಳ ಪ್ರಯೋಜನವುಂಟು. ಅದಕ್ಕಾಗಿ ಆ ಪುಸ್ತಕದ ಭಾಗಗಳನ್ನು ಕ್ರಮಶಃ ಪ್ರಕಟಿಸಲಾಗುತ್ತಿದೆ. ಅನುವಾದ : ಶ್ರೀ ಸಿದ್ದವನಹಳ್ಳಿ ಕೃಷ್ಣಶರ್ಮ.—ಸಂ.)

ಮನುಷ್ಯನ ಕಾರ್ಯ ಕಲಾಪಗಳಲ್ಲಿ ಒಂದು ದೀರ್ಘದೃಷ್ಟಿ, ಇನ್ನೊಂದು ತಾತ್ಕಾಲಿಕ ದೃಷ್ಟಿ ಇರುತ್ತವೆ ಎಂದು ನೋಡಿದೇವಲ್ಲ. ವ್ಯಕ್ತಿಗೆ ಸಾಧಾರಣವಾಗಿ ತನಗೆ ಸದ್ಯ ಸಿಗುವ ಲಾಭದ ದೃಷ್ಟಿಯೇ ಹೆಚ್ಚು. ತನ್ನ ಕಾಲವಾದ ಮೇಲೆ ಫಲ ಕೊಡುವ ಕೆಲಸದಲ್ಲಿ ಅವನಿಗೆ ಆಸಕ್ತಿ ಕಡಮೆ. ನಾಡಿದ್ದು ಬರುವ ಬಂದಾಣೆಗಿಂತ ನಾಳೆ–ಇವೊತ್ತೆ ಮೂರು ಕಾಸು ಬಂದರೆ, ಅವನಿಗೆ ಅದೇ ತೃಪ್ತಿ. ಆದುದರಿಂದ ಇಡೀ ಸಮಾಜದ ಹಿತಕ್ಕಾಗಿ ದೀರ್ಘಾಲೋಚನೆ ಮಾಡಲು ಕೆಲವರನ್ನಾದರೂ ಪ್ರತ್ಯೇಕವಾಗಿ ನೇಮಿಸುವುದು ಅಗತ್ಯವಾಗುತ್ತದೆ. ಇದೇ ರಾಷ್ಟ್ರೀಯ ಸಹಕಾರದ ಕೆಲಸ.

ಸಾಧಾರಣ ಮನುಷ್ಯನ ಶಕ್ತಿ-ಸಾಮರ್ಥ್ಯಗಳಿಗೆ ಎಲ್ಲಾ ಕೆಲಸಗಳನ್ನೂ ಮಾಡಲು ಸಾಧ್ಯವಿಲ್ಲ. ಆದರೆ ಆ ಕೆಲಸ ಅಗತ್ಯ. ಅಂಥ ಕೆಲಸಗಳೆಲ್ಲ ಸರಕಾರದ ಪಾಲಿಗೆ. ಸರಕಾರಕ್ಕೆ ಜನಬಲ–ಧನಬಲ ಎರಡೂ ಅಪಾರ. ಸಂಶೋಧನೆ, ಪ್ರಯೋಗ, ಜ್ಞಾನ ಪ್ರಚಾರಗಳನ್ನು ವೈಯಕ್ತಿಕವಾಗಿ ಒಬ್ಬ ರೈತನಾಗಿ, ಗ್ರಾಮೋದ್ಯೋಗಿಯಾಗಿ ಮಾಡಲಾರ.

ಇದುವರಗೆ ಸರಕಾರದ್ದಾಗಲಿ ಸಾರ್ವಜನಿಕರದಾಗಲಿ ಶಕ್ತಿ–ಸಾಮರ್ಥ್ಯ, ಉತ್ಸಾಹ–ಬಲ ಎಲ್ಲವೂ ಗಿರಣಿ-ಕಾರಖಾನೆ ಪದಾರ್ಥಗಳನ್ನು ಮಾರುವುದರಲ್ಲಿಯೇ ತೊಡಗಿದೆ. ಇನ್ನು ಮುಂದೆ ಗ್ರಾಮೋದ್ಯೋಗದ ಆಧಾರದ ಮೇಲೆ ಗ್ರಾಮಸ್ವಾವ

ಲಂಬನೆಯನ್ನು ನಿರ್ಮಿಸಲು ಈ ಶಕ್ತಿಯೆಲ್ಲವೂ ಉಪಯೋಗವಾಗಬೇಕು. ಈಗ ಹಳ್ಳಿಯವರಿಗೆ ಇರುವ ತೊಂದರೆ, ಅಡ್ಡಿ-ಆತಂಕಗಳನ್ನೆಲ್ಲ ನಿಶ್ಚಯ ಪೂರ್ವಕ ಪ್ರಯತ್ನ ಮಾಡಿ ನಿವಾರಿಸಬೇಕು.

ನೀರಾವರಿ : ಎಲ್ಲಾ ಹಳ್ಳಿಗಳಿಗೂ ನೀರಾವರಿಯ ಅನುಕೂಲತೆಬೇಕು. ಇದನ್ನು ಎಷ್ಟು ಒತ್ತಿ ಹೇಳಿದರೂ ಕಡಮೆಯೆ. ಕೃಷಿಯ ಪ್ರಗತಿಗೆ ಇದೇ ಆಧಾರ. ಇದರ ಹೊರತು ಕೃಷಿ ಬರೀ ಜೂಜಾಟ. ಬಾವಿಗಳನ್ನು ತೋಡಿಸುವುದು, ಕೆರೆಗಳನ್ನು ಆಳ-ಅಗಲ ಮಾಡುವುದು, ಕಾಲುವೆ ತೋಡುವುದು ಮುಂತಾದ ಕಾರ್ಯಕ್ರಮವನ್ನು ಕೈಗೊಳ್ಳಬೇಕು. ಭತ್ತದ ಗಿರಣಿ, ಓಟ್ಟಿನ ಗಿರಣಿಗಳಲ್ಲಿರುವ ಇಂಜಿನುಗಳನ್ನು ಸರಕಾರ ತೆಗೆದುಕೊಂಡು ಕೊಳವೆ ಬಾವಿ, ಸುರಂಗ ಬಾವಿಗಳಿಂದ ನೀರೆತ್ತಲು ಉಪಯೋಗಿಸಬಹುದು. ನೀರಿನ ಅನುಕೂಲವಿಲ್ಲದೆ ಗೊಬ್ಬರ ಹಾಕಿದರೆ ಪ್ರಯೋ ಜನವಿಲ್ಲ. ನೀರಿಲ್ಲದಿದ್ದರೆ ಗೊಬ್ಬರದಿಂದ ಅಪಾಯವಾಗುತ್ತದೆ.

ಭೂವ್ಯವಸ್ಥೆ : ಸಾಗುವಳಿ ಭೂಮಿಯನ್ನು ಹೆಚ್ಚಿಸಬೇಕು. ಹುಲುಸು ಮಾಡಲೂ ಬೇಕು. ನೆಲ ಕೊಚ್ಚಿಹೋಗದಂತೆ ತಡೆಯಲು ಅಡ್ಡಕಟ್ಟೆ ಹಾಕಿ ನೀರು ನಿಂತು ನೆಲ ಹುದಲಾಗದಂತೆ ಕಾಲುವೆ ತೋಡಿ, ಮೆಟ್ಟಲು ಕಟ್ಟಿ ನೆಲದ ಹುಲುಸನ್ನು ಕಾಯಬೇಕು. ಏನೇ ಮಾಡಿದರೂ, ಜನಕ್ಕೆ ದನಕ್ಕೆ ಅನ್ನ-ಮೇವು ಒದಗಿಸುವುದು ಭೂಮಿಯೇ. ಮತ್ತಾವುದೂ ಅಲ್ಲ. ಭೂಮಿಯ ಸಾರ ಕಡಮೆಯಾದರೆ ಬೆಳೆಯೂ ಹೀನವಾಗು ತ್ತದೆ. ಅದರಿಂದ ಜನರ ಆರೋಗ್ಯ ಕೆಡುತ್ತದೆ. ಆದುದರಿಂದಲೇ ಆಹಾರಶಾಸ್ತ್ರ ಪಂಡಿತರು ಆರೋಗ್ಯಕ್ಕೂ ಕೃಷಿಗೂ ಬಿಡದ ಗಂಟು ಎನ್ನುವುದು.

ಬಿಹಾರ ಮೊದಲಾದ ಪ್ರದೇಶಗಳಲ್ಲಿ ಮೊದಲು ಭತ್ತ ಮುಂತಾದ ಧಾನ್ಯ ಗಳನ್ನು ಬೆಳೆಯುತ್ತಿದ್ದ ನೆಲದಲ್ಲಿ ಈಗ ವ್ಯಾಪಾರದ ಬೆಳೆಯಾದ ಕಬ್ಬು. ಹೊಗೆ ಸೊಪ್ಪು, ದೊಡ್ಡ ಹತ್ತಿಗಳನ್ನು ಬೆಳೆಯುತ್ತಿದಾರೆ. ಹಣ ಹೆಚ್ಚು ಬರುವ ದಾರಿ ಹುಡುಕಿದಾರೆ. ಅದೇ ರೀತಿ ಮಲಬಾರಿನಲ್ಲಿ ಸಾವಿರ ಸಾವಿರ ಎಕರೆ ಭತ್ತದ ಗದ್ದೆ ಯಲ್ಲಿ ಈಗ ತೆಂಗಿನ ತೋಟ ಬೆಳೆದಿದೆ. ಈ ತೆಂಗಿನಕಾಯಿ ಎಣ್ಣೆಗಿರಣಿಗಳಿಗೆ ಸರಬ ರಾಜಾಗುತ್ತದೆ. ಆ ಎಣ್ಣೆಯಿಂದ ಆಗುವುದು ಸಾಬೂನು. ಮೊದಲು ಗದ್ದೆಮಾಡಿ ತನ್ನ ಮನೆಯ ಅಕ್ಕಿಯನ್ನು ತಿನ್ನುತ್ತಿದ್ದ ಬೇಸಾಯಗಾರ, ಈಗ ಬ್ರೆಜಿಲ್ ಗಿರಣಿ ಅಕ್ಕಿಯನ್ನು ತಿಂದು ಕಾಯಿಲೆ ಬೀಳುತ್ತಾನೆ. ಜನರು ಪ್ರಾಥಮಿಕ ಅವಶ್ಯಕತೆಗಳನ್ನು ಬೆಳೆಯುವಂತೆ ಮಾಡಬೇಕಾದುದು ಸರಕಾರದ ಕರ್ತವ್ಯ. ಅನ್ನ ಬಟ್ಟೆಗಳ ಉತ್ಪತ್ತಿ ಸಾಕಷ್ಟಾಗಿ ಹೊಲ ಮಿಕ್ಕರೆ, ಆಗ ಅದನ್ನು ವ್ಯಾಪಾರದ ಬೆಳೆಗಳಿಗೆ ಉಪಯೋಗಿಸ ಬಹುದು. ಉತ್ತಮವಾದ ಭತ್ತದ ಗದ್ದೆಗಳು ಸಾಬೂನು ತೋಟಗಳಾಗಿ, ಇತ್ತ ಜನ ಹೊಟ್ಟೆಗಿಲ್ಲದೆ ಸಾಯುವಂಥ ಸ್ಥಿತಿ ಬಂದಿರುವುದು ಸರಕಾರದ ಕರ್ತವ್ಯಲೋಪದ ಅಪರಾಧದಿಂದ ಎಂಬುದನ್ನು ಹೇಳಬೇಕೇ! ಒಂದು ಯೋಜನೆಮಾಡಿ, ಇಂಥಿಂಥ ಬೆಳೆ ಬೆಳೆಯಬೇಕೆಂದು ಲೈಸನ್ಸ್ ಪದ್ಧತಿಯನ್ನು ರೂಢಿಗೆ ತರಬೇಕು.

ಸಂಶೋಧನೆ : ವ್ಯವಸಾಯದ ಸಂಶೋಧನೆಯೆಲ್ಲಾ ಆಹಾರದ ಬೆಳೆಯನ್ನೂ, ಗ್ರಾಮೋದ್ಯೋಗದ ಮೂಲವಸ್ತುವನ್ನೂ ಅಭಿವೃದ್ಧಿಗೊಳಿಸುವ ಪ್ರಯತ್ನಮಾಡಬೇಕು. ಹಣದ ಬೆಳೆಯನ್ನು ಪ್ರೋತ್ಸಾಹಿಸಲಾಗದು: ಹೊಗೆಸೊಪ್ಪು, ಮರಗಬ್ಬು, ದೊಡ್ಡ ಹತ್ತಿಗಳ ಸಂಶೋಧನೆ ಅಗತ್ಯವಲ್ಲ.

ಬಾಡಿಗೆಬಂಕ- ಮೊದಲು ಮಾನ್ಯ : ಈಗ ಗಿರಣಿ ಪದಾರ್ಥ ಗಳಿಗೇ ಪಕ್ಷಪಾತ ತೋರುತ್ತಿದ್ದಾರೆ. ರಿಯಾಯಿತಿ ಬಾಡಿಗೆ, ಸಾಗಾಣಿಕೆಯು–ಮೊದಲು ಮಾನ್ಯ ಗಿರಣಿಗಳಿಗೆ. ಗ್ರಾಮೋದ್ಯೋಗದ ಕೈಕಾಗದ, ಎಣ್ಣೆ ದೀಪ ಮುಂತಾದವನ್ನು ರೈಲಿನಲ್ಲಿ ಕಣ್ಣೆತ್ತಿಯೂ ನೋಡರು. ಇದರಿಂದ ಆ ಉದ್ಯೋಗಗಳಲ್ಲಿ ಪದಾರ್ಥ ಮುಂದೆ ಸಾಗದೆ ನಿಂತುಬಿಡುತ್ತದೆ. ಯುದ್ಧ ಕಾಲದಲ್ಲಿ ಗ್ರಾಮೋದ್ಯೋಗಗಳಿಗೆ ಒಳ್ಳೆಯ ಅವಕಾಶ. ಆಗ ಅವನ್ನು ಬೆಳೆಯಗೊಡದಂತೆ ರೈಲಿನ ಧೋರಣೆ ಹಿಸುಕಿಹಾಕಿತು. ಎಲ್ಲಾ ವಿಷಯಗಳಲ್ಲಿ ಹೇಗೋ ಇದರಲ್ಲಿಯೂ ಹಾಗೆ ಗ್ರಾಮೋದ್ಯೋಗಗಳ ಪರಧೋರಣೆ ಬದಲಾಗಬೇಕು. ಇವಕ್ಕೇ ಪ್ರಥಮಾವಕಾಶ ಸಲ್ಲಬೇಕು. ಗ್ರಾಮೋದ್ಯೋಗದ ವಸ್ತುಗಳಿಗೆ ಪೌರಸಭೆಯ ಸುಂಕ, ವಿಶೇಷ ತೆರಿಗೆ ಮುಂತಾದವನ್ನು ಹಾಕಬಾರದು.

ಗೋಸಂವರ್ಧನ : ಸರಕಾರ ಗೋಸಂವರ್ಧನಾ ಕಾರ್ಯವನ್ನು ಇನ್ನೂ ಹೆಚ್ಚಾಗಿ ಕೈಗೊಳ್ಳಬೇಕು. ಎಲ್ಲೆಲ್ಲಿ ಸ್ಥಳೀಯ ತಳಿ ಇದೆಯೋ ಅದನ್ನು ಕಾಪಾಡಿ ವೃದ್ಧಿಗೊಳಿಸುವ ಪ್ರಯತ್ನ ನಡೆಯಬೇಕು. ಅಗತ್ಯವಿದ್ದ ಕಡೆ ಬೀಜದ ಹೋರಿಗಳನ್ನು ಕಾಪಾಡಲು ಪ್ರೋತ್ಸಾಹ ನೀಡಬೇಕು. ಗೋ ಸೇವಾ ಸಂಘದ ಮೂಲಕ ಈ ಕೆಲಸ ನಡೆದರೆ ಒಳಿತು.

ಸಾಗಾಣಿಕೆ ರಸ್ತೆ : ಹಳ್ಳಿಗಳಲ್ಲಿ ಮೋಟಾರು ಓಡುವ ರಸ್ತೆಗಳಿಗೆಲ್ಲ ಟಾರು ಬಳಿಯಬೇಕು. ಇದರ ವೆಚ್ಚ ಮೋಟಾರು ಒಡೆಯರಿಂದ ಬರಬೇಕು. ಈ ಬಗೆಯ ರಸ್ತೆಗಳ ನಿರ್ಮಾಣದ, ಅವುಗಳ ವ್ಯವಸ್ಥೆಯ ವೆಚ್ಚವೆಲ್ಲವೂ ಹುಟ್ಟುವಳಿಯಾಗುವಂತೆ ಮೋಟಾರುಗಳ ಮೇಲೆ, ಪೆಟ್ರೋಲಿನ ಮೇಲೆ ಸುಂಕ ಹಾಕಬೇಕು. ಟಾರು ಹಾಕದ ರಸ್ತೆಗಳಲ್ಲಿ ಮೋಟಾರು ಓಡಲು ಬಿಡಬಾರದು. ವಿಶೇಷ ಅಪ್ಪಣೆಯ ಮೇಲೆ ಗಂಟೆಗೆ ೫ ಮೈಲಿ ವೇಗದಲ್ಲಿ ಹೋಗಲು ಅವಕಾಶ ಕೊಡಬಹುದು.

ಅರಣ್ಯ ಸಂರಕ್ಷಣೆಯ ವಿಧಾನವನ್ನೂ ಸರಕಾರ ಬದಲಿಸಲೇಬೇಕು. ಅರಣ್ಯ ಶಾಖೆ ಸರಕಾರಕ್ಕೆ ಹಣ ಕೊಡಬಲ್ಲ, ಜನರಿಗೆ ಅನುಕೂಲ ಮಾಡಲಿಕ್ಕೆ. ಕಾಡಿನಲ್ಲಿ ಹುಟ್ಟುವಳಿಯಾಗುವ ತೇಗ, ಅರಗು ಇತ್ಯಾದಿಗಳನ್ನು ಜನರು ಉಪಯೋಗಿಸಬಹುದಾದ ರೂಪದಲ್ಲಿ ಒದಗಿಸಬೇಕು. ಅಡವಿಯ ಸುತ್ತ ಇರುವ ಹಳ್ಳಿಗಳ ಜನರ ಅವಶ್ಯಕತೆಗಳನ್ನು ಗಮನಿಸಿ ಅರಣ್ಯ ಯೋಜನೆ ಮಾಡಬೇಕು. ಮುಖ್ಯವಾಗಿ ಕಾಡು ಎರಡು ವಿಧ : ತೇಗದ ಕಾಡು, ಸೌದೆ–ಹುಲ್ಲು ಬೆಳೆವ ಅಡವಿ. ತೇಗದ ಕಾಡನ್ನು

೨೩ ನೇ ಪುಟ ನೋಡಿ

ಐನ್‌ಸ್ಟೀನರ ಎರಡು ಪತ್ರಗಳು

—ಕೆ. ಎಸ್. ನಾರಾಯಣಸ್ವಾಮಿ

ಅಣುಶಕ್ತಿ ಜನಕರೆಂದೇ ಪ್ರಸಿದ್ಧರಾಗಿರುವ ಆಲ್ಬರ್ಟ್ ಐನ್‌ಸ್ಟೀನ್ ಈ ಶತಮಾನದ ಒಬ್ಬ ಶ್ರೇಷ್ಠ ದಾರ್ಶನಿಕರೂ ಆಗಿದ್ದರು. ಮಾನವೀಯ ಮೌಲ್ಯಗಳಲ್ಲಿ, ಶಾಂತಿ ಚಳುವಳಿಗಳಲ್ಲಿ, ನಿಶ್ಯಸ್ತ್ರೀಕರಣದಲ್ಲಿ ಅವರ ಆಸಕ್ತಿ ಅಪಾರವಾಗಿತ್ತು. ಎರಡನೇ ಮಹಾಯುದ್ಧಕ್ಕೆ ಮುನ್ನ ಜರ್ಮನಿಯಿಂದ ದೇಶಭ್ರಷ್ಟರಾಗಿ ಅಮೆರಿಕದ ನಾಗರಿಕರಾದ ಈ ಯಹೂದಿ ಬುದ್ಧಿಜೀವಿ ಜೀವನ ಪರ್ಯಂತವೂ ವಿಜ್ಞಾನ ಮತ್ತು ಆತ್ಮಜ್ಞಾನಗಳ ಸಮ್ಮಿಳನದ ಬಗ್ಗೆ ಚಿಂತಿಸುತ್ತಿದ್ದರು. ಜಪಾನಿನ ನಾಗಸಾಕಿ ಮತ್ತು ಹಿರೋಷಿಮಾ ನಗರಗಳ ಮೇಲೆ ಮಿತ್ರ ರಾಷ್ಟ್ರಗಳ ಒಕ್ಕೂಟ ಅಣುಬಾಂಬು ಸಿಡಿಸಿದಾಗ ಲಕ್ಷಾಂತರ ಜಪಾನೀಯರು ಮೃತರಾದುದು ಅವರ ಅಂತರಂಗವನ್ನು ಪ್ರಬಲವಾಗಿ ಕಂಪಿಸಿತು. ಅನಂತರ ಅವರು ಪಶ್ಚಾತ್ತಾಪದಿಂದ ಮಾನವನ ರಾಕ್ಷಸೀ ವೃತ್ತಿಗಳು ಹೇಗೆ ವಿಜ್ಞಾನವನ್ನು ಭಸ್ಮಾಸುರನಂತೆ ಪ್ರಯೋಗಿಸುತ್ತಿದೆ ಎಂಬ ಬಗ್ಗೆ ವಿಪುಲವಾಗಿ ಬರೆದಿದ್ದಾರೆ. ಗಾಂಧೀಜಿಯ ಸತ್ಯಶೋಧನೆ ಅವರಿಗೆ ಒಂದು ಪ್ರಭಾವಯುತ ಸಂಶೋಧನೆಯೆನಿಸಿತು. ಮಾನವ ಸಂಸ್ಕೃತಿ ಉಳಿದು ಬಾಳಲು ಗಾಂಧೀ ಮಾರ್ಗವೊಂದೇ ತಾರಕವೆಂದೂ ಪ್ರತಿಪಾದಿಸುತ್ತಿದ್ದರು. ೧೯೫೨ ರಲ್ಲಿ ಜಪಾನಿನ ಒಂದು ಪತ್ರಿಕೆಗೆ ಬರೆದ ಪತ್ರದ ಭಾವಾನುವಾದ ಇಲ್ಲಿದೆ:

"ಅಣುಬಾಂಬು ಉತ್ಪಾದನೆಯಲ್ಲಿ ನನ್ನ ಪಾತ್ರ ಇತ್ತು. ಅಂದಿನ ಅಧ್ಯಕ್ಷ ರೂಸ್‌ವೆಲ್ಟ್‌ಗೆ ಒಂದು ಪತ್ರ ಬರೆದು ಆ ಸಂಶೋಧನೆ ಎಷ್ಟು ಅಗತ್ಯ ಎಂದು ವಾದಿಸಿದ್ದೆ. ಈ ಶೋಧನೆ ಯಶಸ್ವಿಯಾದರೆ ಮಾನವಕುಲಕ್ಕೆ ಅದೆಂತಹ ಘೋರ ಅಪಾಯಗಳನ್ನು ತರಬಲ್ಲದು ಎಂದು ನನಗೆ ತಿಳಿದಿತ್ತು. ಆದರೆ ಆ ಉತ್ಕಟ ಯುದ್ಧ ಸಮಯದಲ್ಲಿ ಜರ್ಮನರೂ ಈ ಬಗ್ಗೆ ಕಾರ್ಯತತ್ಪರರಾಗಿದ್ದರೆಂದು ನನಗೆ ಗೊತ್ತಿತ್ತು. ಅವರೇನಾದರೂ ಮೊದಲು ಅಣುಬಾಂಬು ಸಿದ್ಧಮಾಡಿಬಿಟ್ಟರೆ ಏನು ಗತಿ ಎನಿಸಿತು. ನಾನು ಅಂತರಂಗದಲ್ಲಿ ಶಾಂತಿವಾದಿಯಾದರೂ ಆ ಘಳಿಗೆಯಲ್ಲಿ ಬಾಂಬು ತಯಾರಿಸುವ ನಿರ್ಣಯವನ್ನು ಕೈಗೊಂಡುಬಿಟ್ಟೆ. ನೀತಿಯ ಮತ್ತು ಸಾಧನ ಶುದ್ಧಿಯ ಮಾತು ನನ್ನ ಅಂತರಂಗವನ್ನು ಪ್ರವೇಶಿಸಲೇ ಇಲ್ಲ.

ಎಲ್ಲಿಯವರೆಗೆ ವಿಶ್ವರಾಷ್ಟ್ರಗಳು ತಮ್ಮ ಮಧ್ಯದ ಸಮಸ್ಯೆಗಳನ್ನೆಲ್ಲ ಶಾಂತಿಯುತವಾಗಿ ಪರಸ್ಪರ ತಿಳುವಳಿಕೆಯಿಂದ ಪರಿಹರಿಸಲು ನಿರ್ಣಯಿಸುವುದಿಲ್ಲವೋ ಅಲ್ಲಿಯವರೆಗೆ ಯುದ್ಧಗಳು ನಿಲ್ಲಲಾರವು. ಶಾಸನಬದ್ಧವಾಗಿ ಒಪ್ಪಂದಗಳನ್ನು ಮಾಡಿಕೊಂಡು ಯುದ್ಧವನ್ನೇ ಸಂಪೂರ್ಣವಾಗಿ ಬಹಿಷ್ಕರಿಸಬೇಕು. ಇಲ್ಲದಿದ್ದರೆ ಅನಿವಾರ್ಯವಾಗಿ ಸದಾಕಾಲ ಯುದ್ಧ ಸಿದ್ಧತೆಯೇ ಪ್ರಬಲವಾಗಿ ಪರಿಣಮಿಸಿ ಶಸ್ತ್ರಗಳ ಪೈಪೋಟಿ ನಿಲ್ಲದು. ಅತ್ಯಂತ ಕ್ರೂರ ಮಾರಕಾಸ್ತ್ರಗಳನ್ನೂ ಶೋಧಿಸುತ್ತಲೇ ಸಾಗುತ್ತೇವೆ. ನನಗಂತೂ ಯುದ್ಧದಲ್ಲಿ ಕೊಲ್ಲುವುದಕ್ಕೂ ಸಾಧಾರಣ ಖೂನಿ ಮಾಡುವುದಕ್ಕೂ ಯಾವುದೇ ವ್ಯತ್ಯಾಸ ಕಾಣದು.

ಹೀಗಿರುವಾಗ ಗುರಿಮಟ್ಟಲು ನೈತಿಕ ಮಾರ್ಗ ಹುಡುಕುವುದು ಯಶಸ್ವಿಯಾದೀತೇ? ಯುದ್ಧವನ್ನು ಸಂಪೂರ್ಣವಾಗಿ ನಿಷೇಧಿಸುವ ಬಲವಾದ ಪ್ರಯತ್ನಕ್ಕೆ ಸಹಕಾರ ನೀಡುವುದೇ ನಮ್ಮ ಕರ್ತವ್ಯ. ಈ ಗುರಿಗೆ ವಿರುದ್ಧವಾದುದನ್ನೆಲ್ಲ ಪ್ರತಿಭಟಿಸಿ ನಿಲ್ಲಬೇಕು. ಆದರೆ ಸುತ್ತಲಿನ ಸಮಾಜದ ಮೇಲೆ ಅವಲಂಬಿಸಿರುವ ವ್ಯಕ್ತಿ ಬಿಡಿ ಬಿಡಿಯಾಗಿ ನಿರ್ಣಯಿಸುವಾಗ ಅವನಿಗೆ ಪ್ರಚಂಡ ಆತ್ಮಬಲಬೇಕಾದೀತು. ಈ ಶಕ್ತಿ ಬರುವುದು ಅಸಂಭವವೇನೂ ಅಲ್ಲ.

ನಮ್ಮ ಕಾಲದ ಅತ್ಯಂತ ಮಹಿಮಾವಂತ ರಾಜಕಾರಣಿ (ಗ್ರೇಟೆಸ್ಟ್ ಪೊಲಿಟಿಕಲ್ ಜೀನಿಯಸ್) ಮಹಾತ್ಮಗಾಂಧಿ ಈ ಮಾರ್ಗ ತೋರಿದ್ದಾರೆ. ಒಂದು ಋಜುಮಾರ್ಗದಲ್ಲಿ ನಡೆದಾಗ ಸಾಮಾನ್ಯ ಜನ ಎಂತಹ ತ್ಯಾಗ ಬಲಿದಾನಗಳಿಗೆ ಸಾಮರ್ಥ್ಯ ಪಡೆಯುವರು ಎಂದು ಅವರು ಸಾಧಿಸಿ ತೋರಿಸಿದ್ದಾರೆ. ಹೇಗೆ ದೃಢ ಸಂಕಲ್ಪದ ಆತ್ಮಶಕ್ತಿ ನಿಲ್ಲಲಾರದು ಎನ್ನುವುದಕ್ಕೆ ಭಾರತದ ಸಂಗ್ರಾಮ ಒಂದು ಜೀವಂತ ಸಾಕ್ಷಿ.

“ಕಳೆದ ಎಪ್ಪತ್ತೈದು ವರ್ಷಗಳಿಂದ ಮಾನವ ಸಮಾಜ ಅನೇಕ ಮೂಢನಂಬಿಕೆಗಳನ್ನು ಬಿಟ್ಟು ನೈತಿಕ ನಡತೆಯ ಕಡೆ ಸಾಗುತ್ತಿರುವುದು ನಿಜ. ವಸ್ತುನಿಷ್ಠ ಜಗತ್ತಿನಲ್ಲಿ ಕಾರ್ಯಕಾರಣಗಳನ್ನೂ ವಿವೇಚಿಸಿ ಭೌತಿಕ ವ್ಯಾಪಾರಗಳನ್ನೆಲ್ಲ ಅರ್ಥೈಸಿಕೊಳ್ಳುವ ಸಾಮರ್ಥ್ಯ ಹೆಚ್ಚುತ್ತಿದೆ. ಈ ವೈಜ್ಞಾನಿಕ ಮನೋವೃತ್ತಿ ಎಲ್ಲ ಕಡೆಗೂ ಹರಡುತ್ತಿರುವುದು ಸ್ಪಷ್ಟ. ನಿಚ್ಚಳವಿಚಾರ ಶಕ್ತಿಗೆ ಅಡ್ಡವಾಗುವ ಅನೇಕ ಅಡೆತಡೆಗಳು ಈಗ ನಿವಾರಣೆಯಾಗಿವೆ. ಆದರೆ ಆತಂಕಗಳು ನಿವಾರಣೆಯಾಗಿ ಬಿಟ್ಟರೆ ಸಾಮಾಜಿಕ ಮತ್ತು ವೈಯಕ್ತಿಕ ಜೀವನದಲ್ಲಿ ಗುಣಮಟ್ಟ ತಾನಾಗಿಯೇ ಮೇಲೆರುವುದಿಲ್ಲ. ಈ ಬೆಳವಣಿಗೆ ಕೇವಲ ನಿಷೇಧಾತ್ಮಕ ಪಥದಲ್ಲಿ ಸಾಗಲಾರದು. ಅದಕ್ಕೆ ಪ್ರಬಲವಾದ ನೈತಿಕ ಮತ್ತು ಸಾಂಸ್ಕೃತಿಕ ಪ್ರಜ್ಞೆ ಅಗತ್ಯವಾಗುತ್ತದೆ. ಸಾಮಾಜಿಕ ಜೀವನದಲ್ಲಿ ಹಾಸು ಹೊಕ್ಕಾಗಿ ಹೆಣೆದುಕೊಂಡ ನೀತಿ ಧರ್ಮದ ಆಕಾಂಕ್ಷೆ ನಮ್ಮೆಲ್ಲರಲ್ಲೂ ಬೆಳೆದು ನಿಲ್ಲಬೇಕಾಗುತ್ತದೆ. ಈ ಕಾರ್ಯದಲ್ಲಿ ವಿಜ್ಞಾನ ನಮ್ಮನ್ನು ರಕ್ಷಿಸಲಾರದು. ಕೇವಲ

೨೪ ನೇ ಪುಟ ನೋಡಿ

ಗಂಗಾ ಕಾವೇರಿ ಯೋಜನೆ - ಒಂದು ಮನವಿ

ಈ ದೇಶದ ಎರಡು ಜೀವನದಿಗಳಾದ ಗಂಗಾ-ಕಾವೇರಿಗಳನ್ನು ಜೋಡಿಸುವ ಕಲ್ಪನೆ ಮೊದಲು ಮೂಡಿದ್ದು ಕರ್ನಾಟಕದ ಭಾಗ್ಯಶಿಲ್ಪಿ ಎಂ. ವಿಶ್ವೇಶ್ವರಯ್ಯನವರಿಗೆ.

ಈ ಕಲ್ಪನೆ ಚಿಂತನೆ ಮಟ್ಟಕ್ಕೆ ಬಂದದ್ದು ಡಾ॥ ಕೆ. ಎಲ್. ರಾವ್ ಅವರು ಕೇಂದ್ರ ನೀರಾವರಿ ಮಂತ್ರಿಗಳಾದಾಗ. ೧೯೭೨ ರಲ್ಲಿ ಗಂಗೆಯನ್ನು ಕಾವೇರಿಗೆ ಜೋಡಿಸುವ ಬೃಹತ್ ಯೋಜನೆಯ ತಾಂತ್ರಿಕ ಸಾಧ್ಯಾಸಾಧ್ಯತೆಗಳ ಬಗ್ಗೆ ಸಲಹೆ ಕೇಳಲು ವಿಶ್ವ ಸಂಸ್ಥೆಯ ನೀರಾವರಿ ಪರಿಣತರ ತಂಡವೊಂದನ್ನು ಡಾ॥ ಕೆ. ಎಲ್. ರಾವ್ ಭಾರತಕ್ಕೆ ಬರಮಾಡಿಕೊಂಡರು. ಗಂಗೆಯನ್ನು ಸೋನ್, ನರ್ಮದಾ, ತಪ್ತಿ, ಗೋದಾವರಿ ಮತ್ತು ಕೃಷ್ಣಾಗಳ ಮೂಲಕ ಕಾವೇರಿಗೆ ಸಂಪರ್ಕಿಸುವ ಯೋಜನೆ ತಾಂತ್ರಿಕವಾಗಿ ಸಾಧ್ಯ ಎಂದು ಈ ತಂಡ ಅಭಿಪ್ರಾಯ ಪಟ್ಟಿತು.

ಯೋಜನೆಯ ಪ್ರಕಾರ ಸುಮಾರು ೬೦ ಸಾವಿರ ಕ್ಯೂಸೆಕ್ ಗಂಗೆಯ ನೀರನ್ನು ಪಾಟ್ನಾದ ಬಳಿ ಕಟ್ಟೆಯ ಮೂಲಕ ತಿರುಗಿಸಬಹುದಾಗಿದೆ. ಈ ನೀರಿನಲ್ಲಿ ೧೦ ಸಾವಿರ ಕ್ಯೂಸೆಕ್‌ನಷ್ಟು ನೀರನ್ನು ಬರಪೀಡಿತ ದಕ್ಷಿಣ ಉತ್ತರ ಪ್ರದೇಶ, ದಕ್ಷಿಣ ಬಿಹಾರದ ಪ್ರದೇಶಗಳಿಗೆ ವರ್ಷದ ೩೦೦ ದಿನ ಒದಗಿಸಬಹುದು. ಉಳಿದ ನೀರನ್ನು ೧೫೦ ಅಡಿಯಷ್ಟು ಎತ್ತುಗಡೆ ಮಾಡಿದರೆ ರಾಜಸ್ಥಾನ, ಗುಜರಾತ್, ಮಧ್ಯಪ್ರದೇಶ, ಮಹಾರಾಷ್ಟ್ರ ಮತ್ತು ದಕ್ಷಿಣದ ಕೇರಳವನ್ನುಳಿದ ರಾಜ್ಯಗಳಿಗೂ ಸರಬರಾಜು ಮಾಡಬಹುದು. ಮೊದಲು ಸೋನ್ ನದಿಗೆ ವರ್ಗಾಯಿಸಿ. ಅಲ್ಲಿಂದ ನರ್ಮದಾಕ್ಕೆ ಹರಿಯಬಿಟ್ಟು ಬಿಡುವುದು. ಈ ಜಲಾನಯನ ಪ್ರದೇಶಗಳ ಬರ ಪೀಡಿತ ಭೂಮಿಗೆ ನೀರು ನೀಡೀ ಉಳಿದದ್ದನ್ನು ಗೋದಾವರಿಗೆ ಹರಿಯಬಿಡುವುದು. ಗೋದಾವರಿಯಿಂದ ಪೆನ್ನಾರ್ ನದಿಯ ಮೂಲಕ ಕಾವೇರಿಗೆ ಸಂಪರ್ಕಿಸುವುದು.

ಈ ಒಟ್ಟಾರೆ ಉದ್ದ ೩೬೦೦ ಕಿ. ಮೀ. ಇವುಗಳಲ್ಲಿ ೧೫೦೦ ಕಿ. ಮೀ, ನದಿಗಳ ಮೂಲಕವೇ ನೀರು ಹರಿದರೆ ೧೧೦೦ ಕಿ. ಮೀ. ನಾಲೆಗಳ ಮೂಲಕವಾಗಿರುತ್ತದೆ. ೭೫ ಮೀಟರ್ ಅಗಲ ಈ ನಾಲೆ ಇರುತ್ತದೆ. ೧೯೭೨ ರಲ್ಲಿ ಈ ಇಡೀ ನೀರಾವರಿ ಯೋಜನೆಯ ವೆಚ್ಚ ೨೫೦೦ ಕೋಟಿ ರೂ. ಎಂದು ಅಂದಾಜು ಮಾಡಲಾಗಿತ್ತು.

ಆದರೆ ಈ ಯೋಜನೆಗಿದ್ದ ಅಭ್ಯಂತರವೆಂದರೆ ಇದು ದೇಶದ ಶೇ. ೫೦ ರಷ್ಟು ವಿದ್ಯುತ್ ಬೇಡುತ್ತದೆ ಎಂದು. ಆದರೆ ಈಗಿನ ಅಂದಾಜು ಪ್ರಕಾರ ಕೇವಲ ೮% ವಿದ್ಯುತ್ ಸಾಕು. ತಾಂತ್ರಿಕತೆ ಉತ್ತಮವಿದ್ದಲ್ಲಿ ಇದು ೨% ಇಳಿದೀತು.

ಗಂಗಾ-ಕಾವೇರಿ ಯೋಜನೆಯ ಲಾಭಗಳು : ಆರಂಭಿಕ ಲೆಕ್ಕಾಚಾರದಂತೆ ಕನಿಷ್ಠ ಒಂದು ಕೋಟಿ ಎಕರೆ ನೀರಾವರಿಗೊಳಪಡುತ್ತದೆ. ಬರಪೀಡಿತ ಪ್ರದೇಶಗಳೇ ಇದರಲ್ಲಿ ಅರ್ಧದಷ್ಟು. ಪ್ರವಾಹ ಮತ್ತು ಬರ ಇವೆರಡೂ ಬಹಳೇ ಹತೋಟಿಗೆ ಬರಬಹುದು. ದೇಶದ ಪ್ರವಾಹ ಬರಪೀಡಿತ ಪ್ರದೇಶಗಳ ಅರ್ಧಕ್ಕೂ ಹೆಚ್ಚು ಪ್ರದೇಶದ ನೀರಿನ ನಿರ್ವಹಣೆ ಸುಲಭವಾಗುತ್ತದೆ.

ಸುಲಲಿತವಾದ ಕಾಲುವ ಯೋಜನೆಯಿಂದಾಗಿ ಸರಕು ಸಾಗಣಿಕೆ ಕಡಿಮೆ ವೆಚ್ಚದ ಹೊಸ, ಜಲಮಾರ್ಗವೊಂದು ಸಿದ್ಧಿಯಾಗುತ್ತದೆ. ಇಂದಿನ ಪೆಟ್ರೋಲ್ ಸಮಸ್ಯೆ ಮುಂದಿನ ದಿನಗಳಲ್ಲಿ ಇನ್ನೂ ಬಿಗಡಾಯಿಸೀತು. ಆಗ ಈ ಜಲಮಾರ್ಗ ವರದಾನವೆನ್ನಿಸೀತು. ಖನಿಜಗಳು, ಕಲ್ಲಿದ್ದಲು, ಆಹಾರ ಇವೆಲ್ಲವುಗಳ ಸಾಗಣಿಕೆ ಇದಕ್ಕಿಂತ ಅಗ್ಗದ ದಾರಿ ಇನ್ನೊಂದಿರದು.

೭೫ ಮೀಟರ್ ಅಗಲ, ೭೦ ಮೀಟರ್ ಆಳದ ಕಾಲುವೆ ನಿರ್ಮಾಣವಾಗುವಾಗ ಪ್ರತಿ ಮೀಟರ್‌ಗೂ ೧೫೦೦ ಘನ ಮೀಟರ್ ಮಣ್ಣು ಹೊರ ಚೆಲ್ಲುತ್ತದೆ. ಈ ಮಣ್ಣೇ ಕಾಲುವೆಯ ಇಕ್ಕೆಲಗಳಲ್ಲಿ ರಾಷ್ಟ್ರೀಯ ಹೆದ್ದಾರಿಗಳ ನಿರ್ಮಾಣಕ್ಕೆ ಸಾಕು.

ರಸ್ತೆಗಳ ನಿರ್ಮಾಣ, ರಿಪೇರಿಗೆ ೧೯೯೦-೨೦೦೧ ರವರೆಗೆ ೪೭,೬೫೦ ಕೋಟಿ ರೂ. ಗಳು ಬೇಕೆಂದು ಲೆಕ್ಕಹಾಕಲಾಗಿದೆ. ಈ ಖರ್ಚಿನ ಒಂದು ಭಾಗ ಗಂಗಾ ಕಾವೇರಿ ಯೋಜನೆಯ ಕಾಲುವೆಯ ಕಾರಣದಿಂದಲೇ ಉಳಿಯಬಹುದು. ಉಳಿದ ಸಾಂಸ್ಕೃತಿಕ – ಸಾಮಾಜಿಕ ಲಾಭಗಳು ಇನ್ನಷ್ಟು.

ಈ ಯೋಜನೆಯೇ ರಾಷ್ಟ್ರೀಯ ಐಕ್ಯತೆಯ ಸಂಕೇತವಾಗಿರುವುದರಿಂದ, ಪ್ರವಾಸೀ ಲಾಭಗಳು ಸಾಕಷ್ಟಿವೆ. ಮೀನುಗಾರಿಕೆಗೂ ಸಾಕಷ್ಟು ಅವಕಾಶವಿದೆ.

ಇದೆಲ್ಲಕ್ಕಿಂತ ಹೆಚ್ಚಾಗಿ ಲಕ್ಷಾಂತರ ಜನ ಗ್ರಾಮಸ್ಥರಿಗೆ ಕನಿಷ್ಠ ೩೦ ವರ್ಷ ಕೆಲಸ ನೀಡಬಹುದು. ನಮ್ಮ ಜೀವಿತ ಕಾಲದಲ್ಲಿ ಲಾಭ ಕಾಣದಿದ್ದರೂ, ಉದ್ಯೋಗದ ಜೊತೆಗೇ ರಾಷ್ಟ್ರದ ಇತಿಹಾಸದಲ್ಲಿ ಅಭೂತಪೂರ್ವ ಸೇವೆಯ ಹೆಮ್ಮೆಯನ್ನೂ ಈ ಯೋಜನೆ ನೀಡಬಲ್ಲುದು.

ಈ ಎಲ್ಲ ದೃಷ್ಟಿಗಳಿಂದ, ಕೇಂದ್ರ ಸರ್ಕಾರ ಈ ಯೋಜನೆಯ ಬಗ್ಗೆ ಗಂಭೀರವಾಗಿ ಯೋಚಿಸಬೇಕು.

ಈ ಕುರಿತಂತೆ ಗಂಗಾ ಕಾವೇರಿ ಸಾಧನಾ ಸಮಿತಿಯೊಂದನ್ನು ಕರ್ನಾಟಕದಲ್ಲಿ

೨೪ ನೇ ಪುಟ ನೋಡಿ



ಆಧುನಿಕ ಕೃಷಿಯಿಂದ ಸಾವಯುವ ಕೃಷಿಗೆ

ಮಂಜುನಾಥ ಬಿ. ಹೆಗಡೆ

ನಾನು ಉತ್ತರ ಕನ್ನಡ ಜಿಲ್ಲೆಯ ಸಿದ್ಧಾಪುರ ತಾಲೂಕಿನಲ್ಲಿ ಕೃಷಿ ಮಾಡುತ್ತಿರುವ ರೈತನಾಗಿರುವೆ. ಮಲೆನಾಡಿನ ಗುಡ್ಡಗಳ ಇಳಿಜಾರಿನ ಭೂಮಿಯಲ್ಲಿ ಮುಖ್ಯವಾಗಿ ಭತ್ತವನ್ನು ಬೆಳೆಯುತ್ತಿದ್ದೇನೆ. ಮಳೆಗಾಲದಲ್ಲಿ ಮಾತ್ರ ಈ ಭತ್ತದ ಬೆಳೆಯನ್ನು ತೆಗೆದುಕೊಳ್ಳುತ್ತೇನೆ. ಭತ್ತದ ಫಸಲನ್ನು ಕೊಯ್ದ ನಂತರ ತೇವಾಂಶ ಇರುವ ಕೆಳ ಹಂತದ ಗದ್ದೆಯಲ್ಲಿ ಸ್ವಲ್ಪ ಪ್ರಮಾಣದಲ್ಲಿ ತರಕಾರಿ, ಬೇಳೆ ಕಾಳುಗಳನ್ನು ಬೆಳೆಸುತ್ತೇನೆ.

ನಾನು ಯುವಕನಾಗಿ ಕೃಷಿ ಪರಿವಾರದ ಹಿನ್ನೆಲೆಯಿಂದ ಬಂದಿದ್ದು ೧೯೭೨ ರಲ್ಲಿ ವಿದ್ಯೆಯನ್ನು ನಿಲ್ಲಿಸಿ ಬೇಸಾಯುವನ್ನು ಜೀವನದ ಕ್ರಮವನ್ನಾಗಿ ಆರಿಸಿಕೊಂಡು ಭತ್ತ ಬೆಳೆಯುವ ಹೊಲದ ಜವಾಬ್ದಾರಿಯನ್ನು ವಹಿಸಿಕೊಂಡೆ. ಮೊದಲಿನ ಮೂರು ವರ್ಷ ತಲೆತಲಾಂತರದಿಂದ ಬಂದ ಪರಂಪರಾಗತವಾದ ಬೇಸಾಯ ಪದ್ಧತಿಯನ್ನು ಅನುಸರಿಸಿಕೊಂಡು ಬಂದೆ. ಭೂಮಿಯನ್ನು ಉಳುಮೆ ಮಾಡಿ ಮಳೆಗಾಲದಲ್ಲಿ ಪ್ರತಿ ಚದರ ಮೀಟರಿಗೆ ೧೦–೧೫ ಸಸಿ ನೆಟ್ಟು, ದಡ್ಡಿಯ ಗೊಬ್ಬರವನ್ನು ಹಾಕಿ, ಹಳೆಯ ತಳಿಯ ಭತ್ತವನ್ನು ಬೆಳೆಯುತ್ತಿದ್ದೆನು. ಸಸಿಗಳ ನಾಟಿಯ ನಂತರ ಕಳೆ ಕೀಳಿಸುವ ಮತ್ತು ನೀರು ನಿರ್ವಹಣೆ ಮಾಡಿ ಎಕರೆಗೆ ಆರು ಕ್ವಿಂಟಾಲ್ ಭತ್ತದ ಇಳುವರಿಯನ್ನು ಪಡೆಯುತ್ತಿದ್ದೆ.

ನಾನು ಪರಂಪರಾಗತವಾದ ಕೃಷಿಯನ್ನು ಮಾಡುತ್ತಿರುವಾಗ ಆಧುನಿಕ ಕೃಷಿಯ ಬಗ್ಗೆ ಸರಕಾರಿ ವಲಯದವರು ಮಾಡುತ್ತಿದ್ದ ಪ್ರಚಾರದಿಂದ ಪ್ರಭಾವಿತನಾಗಿ ಈ ಹೊಸ ವೈಜ್ಞಾನಿಕ ಪದ್ಧತಿಯನ್ನು ಅನುಸರಿಸಿ ಹೊಸ ಬೇಸಾಯ ಪದ್ಧತಿಯನ್ನು ಅನುಸರಿಸತೊಡಗಿದೆ. ಇನ್‌ಟೆನ್ಸಿವ್ ಕಲ್ಟಿವೇಶನದ ಪ್ರಚಾರದಿಂದ ಪ್ರಭಾವಿತನಾಗಿ ಆ ಪದ್ಧತಿಯ ತಜ್ಞರಿಂದ, ಆಕಾಶವಾಣಿಯಿಂದ ಈ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿದೆನು. ಹೊಸ ಆಧುನಿಕ ಹೈಬ್ರಿಡ್ ಭತ್ತದ ತಳಿಗಳನ್ನು ಬೆಳೆಸುವ ವಿಧಾನವನ್ನು, ಅದನ್ನು ಬೆಳೆಸಲು ಹಾಕಬೇಕಾಗಿರುವ ರಸಗೊಬ್ಬರ. ಕೀಟನಾಶಕದ ಪ್ರಮಾಣಗಳನ್ನು ತಿಳಿದು ೧೯೭೫ ರಲ್ಲಿ ಆಧುನಿಕ ಕೃಷಿಯ ಬೇಸಾಯ ಪದ್ಧತಿಯನ್ನು ಅನುಸರಿಸಲು ಪ್ರಾರಂಭಿಸಿದೆ.

ಈ ಆಧುನಿಕ ಕೃಷಿ ತಜ್ಞರು ಹೇಳಿದಂತೆ ಪ್ರತಿ ಎಕರೆ ಹೊಲಕ್ಕೆ ೪೦ ರಿಂದ ೫೦ ಕ್ವಿಂಟಾಲ್‌ನಷ್ಟು ಕೊಟ್ಟಿಗೆಯ ಸಾವಯುವ ಗೊಬ್ಬರ, ೩೫ ರಿಂದ ೪೦ ಕ್ವಿಂಟಾಲ್ ಹಸಿರು ಸೊಪ್ಪು, ೩೦ ಕೆ. ಜಿ. ಸಾರಜನಕ (೩ ಕಂತುಗಳಲ್ಲಿ), ೩೦ ಕೆ. ಜಿ. ರಂಜಕ ಮತ್ತು ೩೫ ಕೆ. ಜಿ. ಪೋಟ್ಯಾಶ್ ಅನ್ನು ನಿಯಮಿತವಾಗಿ ಕೊಡ ತೊಡಗಿದೆನು. ಎಕರೆಗೆ ಐದು ಕ್ವಿಂಟಲ್ ಸುಣ್ಣವನ್ನು ೨ ರಿಂದ ೩ ವರ್ಷಕ್ಕೆ ಒಮ್ಮೆ ನೀಡುತ್ತಿದ್ದೆ.

ಹೊಸ ಹೈಬ್ರಿಡ್ ತಳಿಯ ಬೀಜಗಳನ್ನು ಖರೀದಿಸಿ ೧೫೦ ದಿನಕ್ಕೂ ನಂತರ ಕಟಾವಿಗೆ ಬರುವ ತಳಿಯ ಸಸಿಗಳನ್ನು ಪ್ರತಿ ಚದುರ ಮೀಟರಿಗೆ ೫೫–೬೦ ಸಸಿಗಳನ್ನು ನಾಟಿ ಮಾಡುತ್ತಿದ್ದೆ. ೧೫೦ ದಿನಗಳಿಗಿಂತ ಕಡಿಮೆ ಅವಧಿಯ ಹೊಸ ತಳಿ ಸಸಿಗಳನ್ನು ಪ್ರತಿ ಚದುರ ಮೀಟರಿಗೆ ೬೦–೬೫ ಸಂಖ್ಯೆಯಷ್ಟು ನಾಟಿ ಮಾಡುತ್ತಿದ್ದೆ. ನಾಟಿ ಮಾಡಿದ ನಂತರ ಕಾಲ ಕಾಲಕ್ಕೆ ಈ ತಳಿಗಳಿಗೆ ಬರುವ ಕೀಟ ಹಾಗೂ ರೋಗದ ಕ್ರಮವನ್ನರಿತು ಅವನ್ನು ನಿಯಂತ್ರಿಸಲು ಕೀಟನಾಶಕಗಳನ್ನು ಬಳಸುತ್ತಿದ್ದೆ. ಈ ಆಧುನಿಕ ಕೃಷಿ ಪದ್ಧತಿಯ ನಿರ್ವಹಣೆಯನ್ನು ಮಾಡಿದ ಮೊದಲನೆಯ ವರ್ಷ ನಾನು ಪ್ರತಿ ಎಕರೆಗೆ ೨೦ ಕ್ವಿಂಟಾಲ್ ಇಳುವರಿ ಪಡೆದಾಗ ಹಿಗ್ಗಿ ಹೀರೆಕಾಯಿ ಆದೆ. ನನ್ನದು ಸಮಸ್ಯಾತ್ಮಕ ಮಣ್ಣು. (ಈ ಮಣ್ಣಿನ ರಸ ಸಾರ ಐದುವರೆ ಇದೆ. ಜೊತೆಗೆ ಜವುಳು ಭೂಮಿ. ಈ ಸಮಸ್ಯೆಗಳನ್ನೆಲ್ಲ ಬಗೆಹರಿಸಿ ಚಮತ್ಕಾರ ಮಾಡಿ ಇಳುವರಿ ಹೆಚ್ಚಿಸಿದ ಆಧುನಿಕ ಕೃಷಿ ಬಗ್ಗೆ ಬಹಳ ಅಭಿಮಾನ ಉಂಟಾಯಿತು.

ಮುಂದಿನ ೭–೮ ವರ್ಷ ಇದೇ ರೀತಿಯ ಬೇಸಾಯವನ್ನು ವ್ಯತ್ಯಾಸವಿಲ್ಲದೆಯೇ ಮಾಡುತ್ತಾ ಬಂದೆ. ಆದರೆ ಈ ಆಧುನಿಕ ಪದ್ಧತಿಯನ್ನು ಅನುಸರಿಸಿಯೂ ಸಹ ಇಳುವರಿಯ ಪ್ರಮಾಣ ಕಡಿಮೆ ಆಗುತ್ತಾ ಬಂದಿದೆ. ೧೯೮೪–೮೫ ರಲ್ಲಿ ಎಕರೆಗೆ ಕೇವಲ ೧೨ ಕ್ವಿಂಟಲ್ ಇಳುವರಿ ಮಾತ್ರ ಬಂದಿತು. ಈ ಮಧ್ಯೆ ಒಮ್ಮೆ ಹೊಸ ತಳಿಯ ಗೌರಿ ಭತ್ತಕ್ಕೆ ನೆಕಬ್ಲಾಸ್ಟ ರೋಗ ತಗುಲಿ, ಎಲ್ಲ ಕೀಟನಾಶಕದ ಬಳಕೆಯ ನಂತರವೂ ನಿಯಂತ್ರಿಸಲಾಗದೆ ವಿಫಲನಾಗಿ ಪ್ರತಿ ಎಕರೆಗೆ ೨ (ಎರಡು) ಕ್ವಿಂಟಲ್ ಇಳುವರಿ ಪಡೆದು ಆಧುನಿಕ ಕೃಷಿಯ ಚಮತ್ಕಾರದ ಪೊಳ್ಳುತನವನ್ನು ಸ್ವತಃ ಅನುಭವಿಸಿದೆ.

ಈ ಹಂತದಲ್ಲಿ ಆಧುನಿಕ ಕೃಷಿಯ ಬಗ್ಗೆ ಆತ್ಮವಿಮರ್ಶೆ ಮಾಡಿಕೊಳ್ಳತೊಡಗಿದೆ. ಮೂಲತಃ ನನ್ನ ಗದ್ದೆಯಲ್ಲಿದ್ದ ಮಣ್ಣಿನ ಭೌತಿಕ ಗುಣಧರ್ಮವೇ ಬದಲಾಗಿರುವುದನ್ನು ಮನಗಂಡೆ. ಮಣ್ಣು ಬಿರುಸಾಗಿ, ಗಡಸಾಗಿರುವುದನ್ನು ಕಂಡೆನು. ಮಣ್ಣಿನಲ್ಲಿ ನಾನು ಕೊಟ್ಟ ಸಾವಯುವ ಗೊಬ್ಬರದ ಅಂಶ ಮಾಯವಾಗಿ ಎಲ್ಲ ಸೂಕ್ಷ್ಮ ಜೀವಿಗಳೂ ಮೃತರಾಗಿರುವುದರಿಂದ ಈ ಆಧುನಿಕ ಕೃಷಿ ಮಣ್ಣಿಗೆ ಅಪಾಯವನ್ನುಂಟು ಮಾಡುವುದು ಖಚಿತ ಎಂಬುದನ್ನು ಅರಿತುಕೊಂಡೆ. ಈ ಆಧುನಿಕ ರೀತಿಯ ಬೇಸಾಯದ ಪ್ರತಿ ಹಂತದಲ್ಲಿಯೂ ನನಗೆ ವಿಪರೀತ ಕೆಲಸದ ಒತ್ತಡ. ಪ್ರತಿ ಹಂತದಲ್ಲಿ ಕೀಟನಾಶಕದ ಬಳಕೆ, ಕಳೆ ಕೀಳಿಸುವುದು ಮತ್ತು ಬೆಳೆಯ ಕೊಯ್ಲಿನವರೆಗೆ

ಇದರ ನಿರ್ವಹಣೆಗಾಗಿ ಹೆಚ್ಚಿನ ಶ್ರಮವಹಿಸಬೇಕಾಗುತ್ತಿತ್ತು. ಈ ರೀತಿ ಹೆಚ್ಚಿನ ಸಮಯ, ಶ್ರಮ ಮತ್ತು ಹಣವನ್ನು ಖರ್ಚುಮಾಡಿ ನನ್ನ ಬಂಡವಾಳದ ಮಣ್ಣನ್ನು ಹಾಳು ಮಾಡಿಕೊಂಡು ಇಳುವರಿ ಕಡಿಮೆಯಾದ ನಂತರ ಪರ್ಯಾಯ ಕೃಷಿ ಪದ್ಧತಿಯ ಬಗ್ಗೆ ವಿಚಾರ ಮಾಡಲು ತೊಡಗಿದೆ.

ಈ ಪರ್ಯಾಯ ಕೃಷಿ ಹಿಂದಿನ ಪರಂಪರಾಗತವಾದ ಕೃಷಿ ವಿಧಾನದ ಪದ್ಧತಿಗಿಂತ ಭಿನ್ನವಾಗಿದೆ. ಇದನ್ನು ನಾವು ಸುಧಾರಿತ ಸಾವಯುವ ಕೃಷಿ ಎನ್ನಬಹುದು. ಈ ಹಿಂದೆ ನಮ್ಮ ಕ್ಷೇತ್ರದಲ್ಲಿ ಬಳಸುತ್ತಲಿದ್ದ ಹಳೆಯ ಭತ್ತದ ತಳಿಗಾಗಿ ಹುಡುಕಾಡಿದೆ. ನನ್ನ ಗದ್ದೆಯಲ್ಲಿ ಎರಡನೆಯದು ದೊಡ್ಡ ಜಾತಿಯ ಭತ್ತ. ಈ ಸ್ಥಳೀಯ ಜಾತಿಯ ಭತ್ತವನ್ನು ಆರಿಸಿದುದಕ್ಕೆ ಮುಖ್ಯ ಕಾರಣ ಇವುಗಳ ರೋಗ ನಿರೋಧಕ ಗುಣ. ಈ ತಳಿಗಳಿಗೆ ತಗಲುವ ರೋಗಗಳು ಕಡಿಮೆ. ನಾನು ಹೈಬ್ರಿಡ್ ಭತ್ತ ಬೆಳೆದಾಗ ಪ್ರತಿ ವರ್ಷ ಬರುವ ನೆಕ್‌ಬ್ಲಾಸ್ಟ್ ಈ ಹಳೆಯ ತಳಿಗಳಿಗೆ ಬರುವದು ವಿರಳ. ಬಹುಶಃ ಈ ಹಳೆಯ ತಳಿಗಳ ವಂಶವಾಹಿಯಲ್ಲಿ ರೋಗ ನಿರೋಧಕ ಶಕ್ತಿ ಅಡಗಿರಬಹುದೇ? ಇದನ್ನು ಬಳಸಿದ ನಂತರ ಇವುಗಳಿಗೆ ನಿರೋಧಕ ಶಕ್ತಿ ಇದೆ ಎಂದು ಒಪ್ಪಿಕೊಳ್ಳಲೇ ಬೇಕಾಗಿದೆ. ಈ ಹಳೆಯ ತಳಿಗಳನ್ನು ಬೆಳೆಸಲು ಆರಂಭಿಸಿದ ಮೇಲೆ ನನ್ನ ಗದ್ದೆಯಲ್ಲಿ ಕಳೆ ನಿಯಂತ್ರಿಸುವ ಶ್ರಮ, ಚಿಂತೆ ದೂರವಾಗಿದೆ. ಇವುಗಳನ್ನು ನಾಟಿ ಮಾಡಿದ ನಂತರ ಕಳೆ ಕಡಿಮೆ. ಜೊತೆಗೆ ಕಳೆಯ ಮಧ್ಯವೂ ಈ ಭತ್ತದ ಸಸಿಗಳು ಸಶಕ್ತವಾಗಿ ಬೆಳೆಯುವ ಶಕ್ತಿಯನ್ನು ಪಡೆದಿವೆ ಎಂದು ನನ್ನ ಅನುಭವದಿಂದ ಕಂಡುಕೊಂಡೆ.

ಪ್ರತಿ ಎಕರೆಗೆ ಅಂದಾಜು ೫೦ ಕ್ವಿಂಟಲ್‌ನಷ್ಟು ಸಾವಯುವ ವಸ್ತುವನ್ನು ನೀಡುತ್ತೇನೆ. ಇದನ್ನು ಕೊಟ್ಟಿಗೆಯ ಗೊಬ್ಬರದ ರೂಪದಲ್ಲಾಗಲೀ ಅಥವಾ ಹಸಿರು ಸೊಪ್ಪಿನ ರೂಪದಲ್ಲಾಗಲೀ ನಾಟಿ ಮಾಡುವ ಮುಂಚೆ ನೀಡುತ್ತೇನೆ. ಪ್ರತಿ ಚದರ ಮೀಟರಿಗೆ ೩೦-೩೫ ಸಸಿಗಳನ್ನು ನೆಡುತ್ತೇನೆ. ಆದಷ್ಟು ಪ್ರಯತ್ನ ಮಾಡಿ ಜುಲೈ ಅಂತ್ಯದೊಳಗೆ ಸಸಿಗಳನ್ನು ನಾಟಿ ಮಾಡಿ ಮುಗಿಸುತ್ತೇನೆ. ಈ ಸಸಿಗಳು ಗಿಣ್ಣು ಒಡೆಯುವ ಮುಂಚೆ ನಾಟಿ ಮಾಡುವುದು ಉತ್ತಮ. ಸಸಿ ತಯಾರಿಸುವಾಗ ವಿರಳವಾಗಿ, ತೀರ ತೆಳುವಾಗಿ ಅಗೆ ಮಾಡಿದರೆ ಉತ್ತಮ.

ಸಾವಯುವ ಗೊಬ್ಬರಕ್ಕಾಗಿ ನಮ್ಮಲ್ಲಿ ಜಾನುವಾರುಗಳನ್ನು ಸಾಕುವದು ಬಹಳ ಹಿಂದಿನಿಂದ ನಡೆದು ಬಂದ ಪದ್ಧತಿ. ಆದರೆ ಇಂದು ಈ ಜಾನುವಾರುಗಳಿಗೆ ಬೇಕಾಗುವ ಮೇವು ಸಿಗದಿರುವಾಗ ಇವುಗಳನ್ನು ಸಾಕುವದು ಬಹಳ ವೆಚ್ಚದಾಯಕವಾಗಿ ಪರಿಣಮಿಸಿದೆ. ಇದರ ಬದಲಾಗಿ ಪರ್ಯಾಯ ವ್ಯವಸ್ಥೆಯನ್ನು ಮಾಡಿಕೊಳ್ಳುವದು ಅನಿವಾರ್ಯ. ಇದನ್ನರಿತು ನಾನು ಒಂದು ಪರ್ಯಾಯ ವ್ಯವಸ್ಥೆ ಮಾಡಿದ್ದೇನೆ. ನಮ್ಮ ಗದ್ದೆಯ ಸುತ್ತ ಇರುವ ಬದುವಿನ ಮೇಲೆ ಗಡಿಯ ಖಾಲಿ ಜಾಗದಲ್ಲಿ ಗ್ಲಿರಿಸಿಡಿಯಾ ಗಿಡದ ಸೊಪ್ಪನ್ನು ಹಾಕಿ, ಅದನ್ನು ಕೊಳೆಸಿ ಮಣ್ಣಿಗೆ ಬೇಕಾಗುವ ಪೋಷಕಾಂಶಗಳನ್ನು ಪೂರೈಸುವಂತೆ ಮಾಡುವುದು ಸುಲಭ. ಭತ್ತದ

ಬೆಳೆಗೆ ಬೇಕಾಗುವ ಗೊಬ್ಬರ ಹತ್ತಿರದಲ್ಲೆ ಸಿಗುವುದರ ಜೊತೆಗೆ ಹಣದ ವ್ಯಯವೂ ಕಡಿಮೆ. ಸಾಗಾಟದ ಖರ್ಚು, ತೊಂದರೆ ಸಹ ಇಲ್ಲವಾಗುತ್ತದೆ. ಪರ್ಯಾಯ ಕೃಷಿಗೆ ಈ ತರಹದ ಹಸಿರು ಗೊಬ್ಬರದ ಗಿಡಗಳನ್ನು ಹೊಲದಲ್ಲಿ ಹೊಲದ ಹತ್ತಿರ ಬೆಳೆಸಿ, ಬಳಸುವುದು ಅವಶ್ಯಕ.

ಪ್ರತಿ ವರ್ಷ ತಳಿಯನ್ನು ಬದಲಾಯಿಸುತ್ತೇನೆ. ಒಂದು ಕ್ಷೇತ್ರದಲ್ಲಿ ಬೆಳೆದ ತಳಿಯನ್ನು ಮರು ವರ್ಷ ಅಲ್ಲಿ ಬೆಳೆಯುವುದಿಲ್ಲ. ಒಂದು ವರ್ಷ ಬೇರೆ ಭತ್ತದ ತಳಿ ಹಾಕಿ ಪುನಃ ಮೂರನೆಯ ವರ್ಷ ಈ ಹಿಂದೆ ಬೆಳೆದ ತಳಿಯನ್ನು ಬೆಳೆಸಬಹುದಾಗಿದೆ. ಈ ರೀತಿ ಬದಲಾವಣೆಯಿಂದ ಇಳುವರಿಯಲ್ಲಿ ವ್ಯತ್ಯಾಸವಾಗುವುದಿಲ್ಲ. ಜೊತೆಗೆ ಕೀಟಗಳ ಬಾಧೆ, ರೋಗವನ್ನು ನಿಯಂತ್ರಿಸಲು ಸಹಾಯಕ.

ಈ ಬೇಸಾಯದಲ್ಲಿ ರಾಸಾಯನಿಕ ಅಥವಾ ಕೀಟನಾಶಕದ ಬಳಕೆಗೆ ವಿದಾಯ ಹೇಳಿರುವೆನು. ಹೊಲದ ಮಣ್ಣು ತೀಕ್ಷ್ಣ ಆಮ್ಲವಾಗಿರುವುದರಿಂದ ಮಣ್ಣಿನಲ್ಲಿನ ಸೂಕ್ಷ್ಮ ಜೀವಾಣುಗಳ ಚಟುವಟಿಕೆ ಹೆಚ್ಚಾಗಲೆಂಬ ಕಾರಣದಿಂದ ಪ್ರತಿವರ್ಷ ೫-೬ ಚೀಲ ಸುಣ್ಣವನ್ನು ಎರಡನೆಯ ಬಾರಿ ಗದ್ದೆ ಉಳುಮೆ ಮಾಡುವಾಗ ಸೇರಿಸುತ್ತೇನೆ.

ಈ ಪರ್ಯಾಯ ಕೃಷಿಯನ್ನು ಪ್ರಾರಂಭಿಸಿದಾಗ ಮೊದಲಿನ ವರ್ಷ ರಸ ಗೊಬ್ಬರವನ್ನು ಬಳಸದೆ ಸಾವಯವ ಗೊಬ್ಬರ ಬಳಸಿದಾಗ ಇಳುವರಿ ಏಳು ಕ್ವಿಂಟಲ್ ಪ್ರತಿ ಎಕರೆಗೆ ಇಳುವರಿ ಬಂದಿತು. ಆದರೆ ನಂತರದ ಮಣ್ಣಿನ ಗುಣಧರ್ಮ ನಿಧಾನವಾಗಿ ಸುಧಾರಿಸಿದ ಹಾಗೆ ಇಳುವರಿಯೂ ಸಹ ಸುಧಾರಿಸುತ್ತಾ ಈಗ ಇನ್ನೊಂದು ಕ್ವಿಂಟಲ್ (ಪ್ರತಿ ಎಕರೆ) ಬರತೊಡಗಿದೆ. ಹವಾಮಾನದ ವೈಪರೀತ್ಯದಿಂದಾಗಿ ಇಳುವರಿಯಲ್ಲಿ ಒಂದು ಕ್ವಿಂಟಲ್ ಹೆಚ್ಚು ಕಡಿಮೆ ಆಗುವದು ಸಹಜ ಎಂಬುದು ನನ್ನ ಅನಿಸಿಕೆ. ಈ ಹಳೆಯ ತಳಿಗಳ, ಪರ್ಯಾಯ ಕೃಷಿಯ ವಿಶೇಷವೇನೆಂದರೆ, ಈ ತಳಿಗಳು ಹವಾಮಾನದಲ್ಲಿನ ಬದಲಾವಣೆ ಅನುಕೂಲವಾಗುವಂತೆ ಹೊಂದಿಕೊಳ್ಳುವ ಸಾಮರ್ಥ್ಯವನ್ನು ಪಡೆದಿದೆ.

ಆಧುನಿಕ ವೈಜ್ಞಾನಿಕ ಕೃಷಿಗಿಂತ ಶೇಕಡಾ ನಲವತ್ತರಷ್ಟು ಕಡಿಮೆ ವೆಚ್ಚದಲ್ಲಿ ನಾನು ಈ ಪ್ರಮಾಣದಲ್ಲಿ ಇಳುವರಿ ಪಡೆಯುತ್ತಿದ್ದೇನೆ.

ಈ ಖರ್ಚು ವೆಚ್ಚಗಳಿಗಿಂತ ಹೆಚ್ಚಾಗಿ ವೈಜ್ಞಾನಿಕ ಕೃಷಿಯ ಜೊತೆಗೆ ಬರುವ ಹಲವಾರು ಸಮಸ್ಯೆಗಳು ಕಡಿಮೆ ಆಗಿವೆ. ರಸಗೊಬ್ಬರ ಬಳಸಿದಾಗ ಮಣ್ಣು ಗಡುಸಾಗುವುದರ ಜೊತೆಗೆ ಸೂಕ್ಷ್ಮಾಣು ಜೀವಿಗಳ ಚಟುವಟಿಕೆ ಕುಂಠಿತವಾಗುವುದು. ಎರೆ ಹುಳುಗಳು ಬದುಕಿ ಉಳಿಯುವುದೇ ಕಷ್ಟಸಾಧ್ಯ. ಮಣ್ಣಿನ ತೇವಾಂಶವನ್ನು ಹಿಡಿದಿಟ್ಟುಕೊಳ್ಳುವ ಶಕ್ತಿ ಕುಂದುವುದು. ಕೀಟನಾಶಕದ ಬಳಕೆಯಿಂದ ಉಪದ್ರವಿ ಕೀಟಗಳಾದ ಹಾವು, ಕಪ್ಪೆ, ಏಡಿಗಳೂ ಸಹ ಸಾಯುತ್ತವೆ. ಮಣ್ಣಿನ ಸತ್ವವನ್ನು ನಾಶಪಡಿಸಿ ಅದನ್ನು ನಿರಂತರವಾಗಿ ನಿರ್ಜೀವಗೊಳಿಸುವ ವೈಜ್ಞಾನಿಕ ಕೃಷಿಗಿಂತ ಮಣ್ಣಿನ ರಕ್ಷಣೆ ಮಾಡುವ, ಅದನ್ನು ವಿಷಪೂರಿತವನ್ನಾಗಿ ಮಾಡುವ ಪರ್ಯಾಯ ಉತ್ತಮ ಎಂದು ನನ್ನ ನಂಬಿಕೆ.

ಸಾಹಿತ್ಯ ಮತ್ತು ಸಮಾಜ

—ಎ. ಎನ್. ಮೂರ್ತಿರಾವ್

ಸಮಾಜ' ಎಂಬ ಪದದ ಅರ್ಥ ಅಷ್ಟೇನೂ ಸ್ಪಷ್ಟವಲ್ಲ. ಅನೇಕ ವೇಳೆ ಅದನ್ನು ಸ್ಥೂಲವಾಗಿ 'ವ್ಯಕ್ತಿಯೊಬ್ಬನಲ್ಲದೆ ಇತರರೆಲ್ಲರೂ' ಎಂಬ ಅರ್ಥದಲ್ಲಿ ಬಳಸುವುದುಂಟು. ಅಲ್ಲದೆ ಶಿಷ್ಟ ಸಮಾಜ, ಮಧ್ಯಮವರ್ಗದ ಸಮಾಜ, ಬ್ರಾಹ್ಮಣ ಸಮಾಜ, ವೀರಶೈವ ಸಮಾಜ–ಹೀಗೆ ನಾನಾ ಬಗೆಯ ಸಮಾಜಗಳಿರುವುದು ಸಾಧ್ಯ. ಆ ಪದ ಅಸ್ಪಷ್ಟವಾದ್ದರಿಂದ 'ಸಾಮಾಜಿಕ ನಿಲುವು' ಎಂಬ ಮಾತು ಸ್ವಲ್ಪ ಅಸ್ಪಷ್ಟ ವಾಗುತ್ತದೆ. ನಾನು ಪದಗಳ ಲಕ್ಷಣ. [definition] ನ ಹೇಳುವ ಕೆಲಸಕ್ಕೆ ಕೈ ಹಾಕುವುದಿಲ್ಲ. ಆ ಪದವನ್ನು ನಾನು ಹೇಗೆ ಅರ್ಥಮಾಡಿಕೊಂಡಿದ್ದೇನೆ ಎಂಬುದನ್ನು ಮಾತ್ರ ಸೂಚಿಸಿ ಮುಂದುವರಿಯುತ್ತೇನೆ. ಪಾತ್ರವೊಂದರ ಒಟ್ಟು ಜನಸಮೂಹ ದಲ್ಲಿರುವ ಬಡವರು–ಶ್ರೀಮಂತರು, ಬೌದ್ಧರು–ಜೈನರು, ಬ್ರಾಹ್ಮಣರು–ಬ್ರಾಹ್ಮಣೇ ತರರು, ಕಮ್ಯುನಿಸ್ಟರು – ಡೆಮಾಕ್ರಸಿ ಭಕ್ತರು, ಇಂಥ ಬೇರೆ ಬೇರೆ ಯೂನಿಟ್ಟುಗಳ ಸಹ ಜೀವನವನ್ನು, ಅದರ ನಡುವೆ ಸಂಭವಿಸಬಹುದಾದ ಘರ್ಷಣೆಗಳನ್ನು, ಪರಸ್ಪರ ಸಂಬಂಧವನ್ನು, ಪರಸ್ಪರ ವರ್ತನೆಯನ್ನು ಕುರಿತ ಸಮಸ್ಯೆಗಳು; ಅವು ಸಾಹಿತ್ಯದಲ್ಲಿ ಅಭಿವ್ಯಕ್ತ ಪಡೆದಿರುವ ಬಗೆ – ಇದು ಈ ವಿಚಾರ ಸಂಕಿರಣದ ವಿಷಯ ಎಂದು ನಾನು ಭಾವಿಸಿದ್ದೇನೆ.

ಜನ ಸಮೂಹದಲ್ಲಿ ಸಾಮಾಜಿಕ ಸಮಸ್ಯೆಗಳು ಹುಟ್ಟುವುದಕ್ಕೆ ಅನೇಕ ಕಾರಣ ಗಳಿರಬಹುದು. ಮುಖ್ಯವಾದ ಎರಡು ಮೂರನ್ನು ಈಗ ಗಣನೆಗೆ ತೆಗೆದು ಕೊಳ್ಳೋಣ. ೧. ನಾವು ಮೇಲು, ಇತರರು ಕೀಳು ಎಂಬ ಭಾವನೆ. ೨. ಮತ ಧರ್ಮಗಳ ಭಿನ್ನತೆ. ೩. ಆರ್ಥಿಕ ಕಾರಣಗಳು. ಪುರಾತನ ಮಹಾಕಾವ್ಯ ಗಳನ್ನು–ನಮ್ಮ ರಾಮಾಯಣ ಮಹಾಭಾರತಗಳು, ಗ್ರೀಕರ ಇಲಿಯಡ್ ಓಡಿಸಿ ಇತ್ಯಾದಿಗಳನ್ನು–ಬರೆದವರಿಗೆ ಇವೆಲ್ಲ ದೊಡ್ಡ ಸಮಸ್ಯೆಗಳಾಗಿ ಕಾಣಲಿಲ್ಲ. ಅಗಿನ ಸಮಾಜ ರಾಜ ಪ್ರಧಾನವಾದುದ್ದು, ವೀರ ಪ್ರಧಾನವಾದದ್ದು. ಅವುಗಳಲ್ಲಿ ಚಿತ್ರಿತ ವಾಗಿರುವ ಬದುಕು ಸಾಮಾನ್ಯ ಜನರ ಬದುಕಿಲ್ಲ. ರಾಮರಾವಣರ ಯುದ್ಧ ರಾಮ ರಾವಣರದ್ದು, ಯುದ್ಧಕ್ಕೆ ಕಾರಣ ಅವರಿಬ್ಬರ ಬದುಕನ್ನು ಕೆಲವು ವೇಳೆ ಅವರಿಗೆ

ಹತ್ತಿರವಾದವರ ಬದುಕನ್ನು ಕುರಿತದ್ದು; ಅಯೋಧ್ಯೆಯ ಲಂಕೆಯ ಜನಸಾಮಾನ್ಯರ ಬದುಕನ್ನು ಕುರಿತದ್ದಲ್ಲ. ಜನಸಾಮಾನ್ಯ–ಇತ್ತು; ಆದರೆ ಅದು ಲೆಕ್ಕಕ್ಕಿಲ್ಲ ಜಮೆಗಿಲ್ಲ. ರಾಮನಿಗೆ ಯುವರಾಜ ಪಟ್ಟವನ್ನು ಕಟ್ಟುವ ಯೋಚನೆ ಬಂದಾಗ ದಶರಥ ಅದನ್ನು ನಗರವಾಸಿಗಳ ಅವಗಾಹನೆಗೆ ತಂದು ಅವರ ಒಪ್ಪಿಗೆ ಪಡೆದನಂತೆ. ಆದರೆ ರಾಮನನ್ನು ಕಾಡಿಗೆ ಕಳಿಸಿದಾಗ ಅವರ ಒಪ್ಪಿಗೆ ಬೇಕಾಗಲಿಲ್ಲ! ಉತ್ತರ ಕಾಂಡದಲ್ಲಿ ಶಂಬೂಕನ ಕಥೆ ಒಂದು ಸಾಮಾಜಿಕ [ಮತ್ತು ಆಗಿನ ಜನರ ದೃಷ್ಟಿಯಲ್ಲಿ ಧಾರ್ಮಿಕ ಕೂಡ] ಸಮಸ್ಯೆಯನ್ನು ಎತ್ತುತ್ತದೆ; ನಿಜ. ಭವಭೂತಿಯ 'ಉತ್ತರ ರಾಮ ಚರಿತೆ' ಯಲ್ಲಿ ರಾಮ ಶಂಬೂಕವಧನಾಗಿ ತನ್ನನ್ನು ತಾನೇ ನಿಂದಿಸಿಕೊಂಡನೆಂಬ ಸೂಚನೆಯಿದೆ. ಆದರೆ ಇವು ಅಪರೂಪದ ಪ್ರಸಂಗಗಳು. ಸಾಮಾನ್ಯವಾಗಿ ಮಹಾಕಾವ್ಯಗಳಲ್ಲಿನ ವ್ಯವಹಾರವೆಲ್ಲ ಶ್ರೀಮಂತವರ್ಗದ ಪರವಾದುದು. ದೇಶದ ಮಾತು ಆಗಾಗ ಬರುತ್ತದೆ. ಆದರೆ ರಾಜ ದೇಶದ ಸಂಕೇತ, ಅವನು ರಾಜ್ಯವನ್ನು ಆಳುವವನು ಮಾತ್ರವಲ್ಲ, ರಾಜ್ಯ ಅವನ ಸ್ವತ್ತು. ಆದರೆ ನಮ್ಮ ಮಹಾಕಾವ್ಯಗಳಲ್ಲಿ ಅವನು ಪ್ರಜೆಗಳನ್ನು ಹೇಗೆ ನೋಡಿಕೊಳ್ಳಬೇಕು ಎಂಬುದಕ್ಕೆ, ರಾಜಧರ್ಮಕ್ಕೆ ಸ್ವಲ್ಪ ಗಮನ ಸಲ್ಲುತ್ತದೆ.

ಪಾಶ್ಚಾತ್ಯರಲ್ಲಿ ಈ ಒಡೆತನದ ಭಾವನೆ ಘನಿಸಿ ಫ್ಯೂಡಲ್ ವ್ಯವಸ್ಥೆಯ ರೂಪವನ್ನು ತಾಳಿತು. ಆ ವ್ಯವಸ್ಥೆಯಲ್ಲಿ ಹುಟ್ಟಿನ ಆಧಾರವುಳ್ಳ ಮೇಲು–ಕೀಳು ಭಾವನೆ ಸ್ಪಷ್ಟವಾಗಿಯೇ ಕಾಣುತ್ತದೆ. ಅದು ಬಹಳ ಹಿಂದಿನಿಂದಲೂ ಇದ್ದದ್ದೇ. ಪುರಾತನ ಗ್ರೀಸಿನ ಪೌರರೂ ಹೆಲಟ್ ಜನರೂ ಒಟ್ಟು ಸೇರಲಿಲ್ಲ; ಸಮಾನ ಸದಸ್ಯರ ಸಮಾಜ ಏರ್ಪಡಲಿಲ್ಲ. ಹೆಲಟ್‌ರು ಗುಲಾಮರಾಗಿಯೇ ಉಳಿದರು. ಪುರಾತನ ರೋಮ್‌ನಲ್ಲೂ ಗುಲಾಮ ವರ್ಗದವರು ಮಾತ್ರವಲ್ಲ ಪ್ಯಾಟ್ರಿಷಿಯನ್ ಪ್ಲಿಬಿಯನ್ ಎಂಬ ವರ್ಗದವರೂ ಒಟ್ಟು ಸೇರಿ ಸಮಾನ ಸದಸ್ಯರ ಸಮಾಜವನ್ನು ನಿರ್ಮಿಸಲಿಲ್ಲ. ಫ್ಯೂಡಲ್ ವ್ಯವಸ್ಥೆಯಲ್ಲಿ ಈ ಅಸಮಾನತೆ ವ್ಯಾಪಕವಾಗಿ ಹಬ್ಬಿತು; ಮೊದಲಿಗಿಂತ ಹೆಚ್ಚು ವ್ಯವಸ್ಥಿತವಾಗಿ ಭದ್ರವಾದ ಅಸ್ತಿಭಾರದ ಮೇಲೆ ನಿಂತಿತು. ಈ ವ್ಯವಸ್ಥೆಯ ಪ್ರಭಾವ ಷೇಕ್‌ಸ್ಪಿಯರ್ ನಾಟಕಗಳಲ್ಲಿ–ಎಲಿಸಬೆತ್ ಕಾಲದ ಸಾಹಿತ್ಯದಲ್ಲೆಲ್ಲ ಎಂದೇ ಹೇಳಬಹುದು–ಕಾಣುತ್ತದೆ. ಷೇಕ್‌ಸ್ಪಿಯರ್ ತನ್ನ 'ಟ್ರಾಯ್ಲಸ್ ಮತ್ತು ಕ್ರೆಸಿಡ' ಎಂಬ ನಾಟಕದಲ್ಲಿ ಈ ವ್ಯವಸ್ಥೆಯನ್ನು ತನ್ನದೇ ಆದ ರೀತಿಯಲ್ಲಿ ಬಣ್ಣಿಸಿದ್ದಾನೆ. ವ್ಯವಸ್ಥೆಗೆ ಆ ನಾಟಕದಲ್ಲಿ ಕೊಟ್ಟಿರುವ ಹೆಸರು 'ಡಿಗ್ರಿ'. ಡಿಗ್ರಿ ಥಿಯರಿಯನ್ನು ಪ್ರತಿಪಾದಿಸುವವನು ಆ ನಾಟಕದ ಪಾತ್ರಗಳಲ್ಲೊಬ್ಬನಾದ ಯೂಲಿಸೀಸ್. ಆ ಥಿಯರಿಯ ಪ್ರಕಾರ ಡಿಗ್ರಿ ವ್ಯವಸ್ಥೆ ಊರ್ಧ್ವ ಲೋಕದಲ್ಲೂ ಇದೆ. ಸೂರ್ಯ ಇತರ ಗ್ರಹಗಳಿಗಿಂತ ಉನ್ನತ. ಆ ಗ್ರಹಗಳು ನಿಯಮವನ್ನು ಮೀರಿದು ಸ್ವಚ್ಛಂದವಾಗಿ ವರ್ತಿಸಿದರೆ ವಿಶ್ವದ ಗತಿಯೇನು! ಹಾಗೆಯೇ ಭೂಲೋಕದಲ್ಲಿ ರಾಜನ ಔನ್ನತ್ಯ, ರಾಜಮುಕುಟ, ರಾಜದಂಡ, ಇವೆಕ್ಕೆಲ್ಲ ಆಧಾರ--ಡಿಗ್ರಿ.

ಈ ವ್ಯವಸ್ಥೆಗೆ ಐತಿಹಾಸಿಕ ಕಾರಣಗಳಿದ್ದವು – ಅವು ಈಗ ನಮಗೆ ಪ್ರಸಕ್ತವಲ್ಲ. ಒಟ್ಟಿನಲ್ಲಿ ಆಗಿನ ಜನ ಫ್ಯೂಡಲ್ ವ್ಯವಸ್ಥೆಯನ್ನು ಒಪ್ಪಿಕೊಂಡಂತೆ ಕಾಣು

ತ್ತದೆ. ಕೆಳವರ್ಗದವರಿಂದ ವಿರೋಧ ಬರಲೇ ಇಲ್ಲವೆಂದಲ್ಲ. ಘರ್ಷಣೆಗಳಾಗು ತ್ತಿದ್ದವೆಂಬುದಕ್ಕೆ ಇತಿಹಾಸದ ಸಾಕ್ಷ್ಯವಿದೆ. ಬಹುಶಃ ಆ ಘರ್ಷಣೆಗಳು ವ್ಯವಸ್ಥೆ ಯನ್ನು ಕುರಿತ ಪ್ರತಿಭಟನೆ ಎನ್ನುವುದಕ್ಕಿಂತ ತಾತ್ಕಾಲಿಕವಾಗಿ ಸಂದರ್ಭವೊಂದರಲ್ಲಿ ನಡೆದ ಅನ್ಯಾಯಕ್ಕೆ ಪ್ರತಿಭಟನೆ ಎಂದರೆ ಸರಿಹೋದೀತು. ಅದು 'ಫ್ಯೂಡಲ್ ವ್ಯವಸ್ಥೆಯನ್ನೇ ಬುಡಮೇಲು ಮಾಡಬೇಕು' ಎನ್ನುವ ಸಾಮಾಜಿಕ ಥಿಯರಿಯೊಂದರ ಫಲವಾಗಿ ಬಂದ ಪ್ರತಿಭಟನೆಯಲ್ಲ. ಆದರೂ ಕೆಲವು ವೇಳೆ ಕ್ರಾಂತಿಕಾರಕ ಪ್ರಶ್ನೆಗಳು ಬಂದದ್ದುಂಟು; ೧೪ ನೆಯ ಶತಮಾನದಲ್ಲಿ ವಿಕ್ಲಿಫ್ [Wycliffe] ಮತ್ತು ಅವನ ಅನುಯಾಯಿಗಳು (ಅವರನ್ನು ಲಾಲಡ್ಸ್– ಎಂದು ಕರೆಯುತ್ತಿದ್ದರು) ಈ ಮೂಲ ಭೂತವಾದ ಪ್ರಶ್ನೆಯನ್ನು ಎತ್ತಿದರು.

When Adam delved Eve span
where was then the gentleman?

ಆದಮನೂ ಅಗೆಯುತ್ತಿದ್ದಾಗ, ಈವಳು ನೂಲುತ್ತಿದ್ದಾಗ (ಅಂದರೆ ಮಾನವ ಕುಲದ ಸೃಷ್ಟಿಯಾದ ತರುಣದಲ್ಲಿ) ಜೆಂಟ್ಲ್‌ಮನ್ ಎಲ್ಲಿದ್ದ! ಆದರೆ ಈ ಪ್ರತಿಭಟನೆಗಳು ನಾವು ಬೆಂಕಿಕಡ್ಡಿ ಗೀಚಿದಾಗ ಏಳುವ ಉರಿಯ ಹಾಗೆ ಉರಿ ಏಳುತ್ತದೆ, ನಿಜ. ಆದರೆ ಕ್ಷಣಾರ್ಧದಲ್ಲಿ ನಂದಿಹೋಗುತ್ತದೆ. ಎಲಿಸಬೆತನ್ ಸಾಹಿತ್ಯದಲ್ಲಿ ರಾಜನನ್ನು ನಿರ್ದೇಶಿಸಬೇಕಾಗಿ ಬಂದಾಗ ಅವನ ಹೆಸರಿಗೆ ಬದಲಾಗಿ ಅವನ ದೇಶದ ಹೆಸರನ್ನು ಬಳಸಿರುವುದುಂಟು. ರಾಜನ ಹೆಸರು ರಿಚರ್ಡ್ ಎಂದೋ ಇರಬಹುದು. ಆದರೆ ಅವನನ್ನು ನಿರ್ದೇಶಿಸುವುದು 'ಇಂಗ್ಲೆಂಡ್', ಎಂದು ಅಥವಾ 'ಫ್ರಾನ್ಸ್' ಎಂದು ಇದು ರಾಜನ ಸ್ಥಾನಕ್ಕೆ ಎಷ್ಟು ಮಹತ್ವವಿತ್ತು ಎಂಬುದನ್ನು ಸೂಚಿಸುತ್ತದೆ. ಒಬ್ಬ ರಾಜ ಇನ್ನೊಬ್ಬ ರಾಜನ ಮಗಳನ್ನು ಮದುವೆಯಾದರೆ, ಮಾವ ತನ್ನ ಅಳಿಯನಿಗೆ ರಾಜ್ಯದ ಒಂದು ಪ್ರಾಂತ್ಯವನ್ನು ಬಳುವಳಿಯಾಗಿ ಕೊಡಬಹುದಿತ್ತು. ಆ ಪ್ರಾಂತ್ಯದ ಪ್ರಜೆಗಳ ಒಪ್ಪಿಗೆ ಅವಶ್ಯಕವಲ್ಲ; ದನಕರುಗಳನ್ನೂ ಮರಮುಟ್ಟುಗಳನ್ನೂ ದಾನ ಮಾಡುವಂತೆ ಪ್ರಾಂತ್ಯದ ಜತೆಗೆ ಅಲ್ಲಿಯ ಪ್ರಜೆಗಳನ್ನು ದಾನಮಾಡಬಹುದು. ನಮ್ಮ ಸಾಹಿತ್ಯದಲ್ಲೂ ಜಾನಪದ ಕಥೆಗಳಲ್ಲೂ ರಾಜ ತನಗೆ ಇಷ್ಟನಾದವನಿಗೆ ಅರ್ಧ ರಾಜ್ಯ ಕೊಟ್ಟ ಎಂಬ ಮಾತು ಬರುತ್ತದೆ. 'ಅಳಿಯ ತನ್ನ ರಾಜ್ಯವನ್ನೂ ಮಾವನ ರಾಜ್ಯ ವನ್ನೂ 'ಆ ರಾಜ್ಯ ಈ ರಾಜ್ಯ ಎರಡನ್ನೂ' ಒಂದು ರಾಜ್ಯಮಾಡಿಕೊಂಡು ನೂರು ಕಾಲ ಸುಖವಾಗಿ ಬಾಳಿದ ಎಂದು ಕೊನೆಗಾಣುವ ಜಾನಪದ ಕಥೆಗಳನ್ನು ನಾವೆಲ್ಲ ಕೇಳಿ ದ್ದೇವೆ. ಇಂಥ ಸಂದರ್ಭದಲ್ಲಿ ಪ್ರಜೆಗಳ ಗತಿಯೇನಾಯಿತು. ಎಂಬುದರ ಮಾತೇ ಬರುವುದಿಲ್ಲ. ರಾಜ್ಯ ರಾಜನ ಸ್ವತ್ತು ಎಂದ ಮೇಲೆ ಪ್ರಜೆಗಳು ಅವನ ಸ್ವತ್ತು! ಈ ಬಡತನದ ಭಾವನೆಯನ್ನು ಫ್ರಾನ್ಸಿನ ೧೪ ನೆಯ ಲೂಯಿ ಸೂತ್ರವೊಂದರಲ್ಲಿ ಅಡಕ ಮಾಡಿದ; 'ರಾಜ್ಯ ಎಂದರೆ ನಾನೇ'.

ರಾಜನ ಈ ಪ್ರತಿಷ್ಠಿತ ಸ್ಥಾನ ದೇವರೇ ಅನುಗ್ರಹಿಸಿದ್ದು ಎಂಬ ಭಾವನೆಯೂ ಇತ್ತು. ಇದನ್ನು The divine right of kings ಎಂದು ಕರೆಯುತ್ತಾರೆ.

ಇದು ವಿದ್ಯುಕ್ತವಾಗಿ ಪ್ರಚಾರಕ್ಕೆ ಬಂದದ್ದು ರಿಚರ್ಡ್ II ನ ಕಾಲದಲ್ಲಲ್ಲ; ಆದರೂ ಆ ಹೆಸರಿನ ನಾಟಕದಲ್ಲಿ ಷೇಕ್ಸ್ಪಿಯರ್ ಅದರ ಪ್ರಸ್ತಾಪವನ್ನು ತಂದಿದ್ದಾನೆ. ಈ ಸಂದರ್ಭದಲ್ಲಿ ನಾವು ನಮ್ಮಲ್ಲಿ ಪ್ರಚಲಿತವಾಗಿದ್ದ 'ನಾ ವಿಷ್ಣುಃ ಪೃಥಿವೀಪತಿಃ' ಎಂಬ ಮಾತನ್ನು ನೆನೆಯಬಹುದು.

ರಾಜನಿಗೆ ಇಡೀ ರಾಜ್ಯದ ಮೇಲೆ ಒಡೆತನವಿದ್ದಂತೆ ಚಿಲ್ಲರೆ ರಾಜರು ಎನ್ನಬಹುದಾದ ಮಾಂಡಲಿಕರಿಗೆ ಡ್ಯೂಕ್, ಮಾರ್ಕ್ವಿಸ್, ಅರ್ಲ್ಸ್ ಮೊದಲಾದವರಿಂದ ಹಿಡಿದು ಹಳ್ಳಿಗಳಲ್ಲಿ ಪ್ರಮುಖರಾಗಿದ್ದ (ಆದರೆ ಮಾಂಡಲಿಕರಲ್ಲದ) ಸ್ಕ್ವಯರ್‌ಗಳ (squires) ವರೆಗೆ ಎಲ್ಲರಿಗೂ ತಮ್ಮ ತಮ್ಮ ಮಿತಿಯಲ್ಲಿ ಭೂಮಿಕಾಣಿಕೆಯ ಮೇಲಿನ ಒಡೆತನವಿತ್ತು. ಅವರು ತಮ್ಮ ಸೇವಕರ ಮೇಲೂ ಒಡೆತನದ ದರ್ಪವನ್ನು ಪ್ರಯೋಗಿಸುತ್ತಿದ್ದರು. ಶ್ರೀಮಂತ ವರ್ಗದವರಲ್ಲಿ ತೀರ ಕೆಳಗಿನವರು ಎಂದರೆ ಸ್ಕ್ವಯರ್‌ಗಳು ಅವರು ಕೂಡ ತಮ್ಮ ಸರ್ಫ್ (serfs)ಗಳ ಕುತ್ತಿಗೆಗೆ (ನಾವು ನಾಯಿಗಳಿಗೆ ಕಾಲರ್ ಹಾಕುವಂತೆ) ಕಬ್ಬಿಣದ ಕಾಲರ್ ಹಾಕುತ್ತಿದ್ದರಂತೆ. ಸರ್ಫ್ ತನ್ನ ಸ್ವತ್ತು ಎಂಬುದರ ಸಂಕೇತ–ಆ ಕಾಲರ್! ಸರ್ ವಾಲರ್ ಸ್ಕಾಟನ್ 'ಐವನ್ ಹೋ' ಎಂಬ ಕಾದಂಬರಿಯಲ್ಲಿ ಇದರ ಪ್ರಸ್ತಾಪ ಬರುತ್ತದೆ.

ಫ್ರಾನ್ಸ್‌ನಲ್ಲಿ ಮಾಂಡಲಿಕರಿಗೆ ಹಿಂದೆ ಹೇಳಿದ್ದಕ್ಕಿಂತ ಅಸಹ್ಯವಾದ ಹಕ್ಕೊಂದು ಇತ್ತಂತೆ. ಅದರ ಹೆಸರು ಮಾಂಡಲಿಕನ ಹಕ್ಕು-ಅದು ತಮ್ಮ ಸೇವಕರ ಹೆಣ್ಣು ಮಕ್ಕಳ ಮೇಲೆ ಮಾಂಡಲಿಕನಿಗಿದ್ದ ಹಕ್ಕು; ಕೆಲವರ ಅಭಿಪ್ರಾಯದಂತೆ ಈ ಥಿಯರಿ ಇತ್ತಾದರೂ ಇದನ್ನು ಆಚರಣೆಗೆ ತಂದದ್ದು ಅಪರೂಪ.

ಇಂತಹ ಸಾಮಾಜಿಕ ವ್ಯವಸ್ಥೆಗಳ; ಥಿಯರಿಗಳ, ಸಮಸ್ಯೆಗಳ ಪ್ರಸ್ತಾಪ ಇಂಗ್ಲಿಷ್ ಸಾಹಿತ್ಯದಲ್ಲಿ ಎಷ್ಟೋ ಕಡೆ ಬರುತ್ತದೆ. ಉದಾಹರಣೆಗಾಗಿ ಕೆಲವು ಲೇಖಕರ ಹೆಸರನ್ನು ಹೇಳಬಹುದು. ಡಿಕನ್ಸ್‌ನ A Tale of two cities ಎಂಬ ಕಾದಂಬರಿ ಫ್ರಾನ್ಸಿನ ಮಹಾಕ್ರಾಂತಿಗಿಂತ ಸ್ವಲ್ಪ ಹಿಂದಿದ್ದ ಸಮಾಜದ ಚಿತ್ರದ ಜತೆಗೆ ಕ್ರಾಂತಿಕಾಲದ ಚಿತ್ರಗಳನ್ನು ಕೊಡುತ್ತದೆ. ಬ್ಯಾರನೆಸ್ ಆರ್ಟಿಸಿ (orezj) ಎಂಬಾಕೆಯ ಕೃತಿ ಕ್ರಾಂತಿಕಾಲವನ್ನು ಚಿತ್ರಿಸುತ್ತದೆ. ಎಡ್ಮಂಡ್ ಬರ್ಕ್ ಥಾಮಸ್ ಕಾರ್ಲೈಲ್ ಫ್ರಾನ್ಸಿನ ಕ್ರಾಂತಿಯನ್ನು ಕುರಿತು ವಿಸ್ತಾರವಾಗಿ ಬರೆದಿದ್ದಾರೆ. ಕಷ್ಟಪಟ್ಟು ಬೆವರು ಸುರಿಸಿ ತಮ್ಮ ಅನ್ನವನ್ನು ತಾವು ಸಂಪಾದಿಸಿಕೊಳ್ಳುತ್ತಿದ್ದ ಜನರನ್ನು ಕಂಡರೆ ೧೯ ನೆಯ ಶತಮಾನದಲ್ಲಿ ಕೂಡ ಜಮೀನುದಾರರಿಗೆ ತಿರಸ್ಕಾರ; ದುಡಿದು ಜೀವನ ಮಾಡುವವರು ಹುಟ್ಟಿನಿಂದಲೇ ಕೀಳು ಎಂದು ಅವರ ನಂಬಿಕೆ. ಮೆರಿಡಿತ್‌ನ 'ಎವನ್ ಹ್ಯಾರಿಂಗ್‌ಟನ್' ಎಂಬ ಕಾದಂಬರಿ ಈ ಮನೋವೃತ್ತಿಯ ವಿಡಂಬನೆಗೆ ಮೀಸಲಾಗಿದೆ.

ಸಾಮಾಜಿಕ ನಿಲುವುಗಳಿಗೆ ಸಾಹಿತ್ಯದಲ್ಲಿ ಎಷ್ಟು ಕಲಾತ್ಮಕವಾಗಿ ಅಭಿವ್ಯಕ್ತಿ ಕೊಡಬಹುದು ಎಂಬುದನ್ನು ಮನಗಾಣಬೇಕಾದರೆ ಷೇಕ್ಸ್ಪಿಯರ್‌ನ ಐತಿಹಾಸಿಕ ನಾಟಕಗಳನ್ನು ಪರಿಶೀಲಿಸಬೇಕು. ಅವನ ಸಾಮಾಜಿಕ ಅಭಿಪ್ರಾಯಗಳು ತೀರ

ಮಂದಗಾಮಿ ಎಂದು ವಿಮರ್ಶಕರು ಆಕ್ಷೇಪಿಸಿದ್ದಾರೆ. ಮೇಲುನೋಟಕ್ಕೆ ಅವರ ಆಕ್ಷೇಪಣೆ ಸಾಧು ಎನ್ನಿಸಬಹುದು. ಸಾಮಾನ್ಯವಾಗಿ ಅವನ ಕೃತಿಗಳಲ್ಲಿ ನಾಯಕ ಪಟ್ಟ ಸಲ್ಲುವುದು ರಾಜರಿಗೆ ಅಥವಾ ಮಾಂಡಲಿಕರಿಗೆ, ಕೃತಿಗಳ ಕಥಾವಸ್ತು ಅವರ ಬದುಕನ್ನೇ ಕುರಿತದ್ದು. ಈ ಮಾತು ಅವನ ಐತಿಹಾಸಿಕ ನಾಟಕಗಳಿಗೆ ಮಾತ್ರವಲ್ಲ, ಇತರ ನಾಟಕಗಳಿಗೂ ಅನ್ವಯಿಸುತ್ತದೆ. ಹಿಂಡುಗಟ್ಟಿಕೊಂಡು ಬರುವ ಕೆಳವರ್ಗದ ಜನರನ್ನು ಅವನು ಕೆಲವು ನಾಟಕಗಳಲ್ಲಿ ಚಿತ್ರಿಸಿದ್ದಾನೆ. ಅವರ ವಿಷಯದಲ್ಲಿ ಅವನಿಗೆ ತಿರಸ್ಕಾರ, ಅವನ ದೃಷ್ಟಿಯಲ್ಲಿ ಆ ಜನ-mob-ಬುದ್ಧಿಯಿಲ್ಲದವರು, ಅವರಿಗೆ ಆಲೋಚನಾಶಕ್ತಿಯಿಲ್ಲ; ರಾಜಕಾರಣಿಗಳ ಮಾತಿನ ಮೋಡಿಗೆ ಅವರು ಸುಲಭವಾಗಿ ಬಲಿಯಾಗುತ್ತಾರೆ. ಅವರನ್ನು ಅರೆಘಳಿಗೆಯಲ್ಲಿ ಹುಚ್ಚಿಗೆಬ್ಬಿಸಬಹುದು; ಹುಚ್ಚಿಗೆದ್ದಾಗ ಅವರು ಎಂಥ ಅಮಾನುಷ ಕ್ರೂರಕೃತ್ಯಕ್ಕಾದರೂ ಹೇಸುವವರಲ್ಲ. ಇಂಥ ಚಿತ್ರಗಳು 'ಹೆನ್ರಿ iv' ನಾಟಕದಲ್ಲೂ 'ಜೂಲಿಯಸ್ ಸೀಸರ್' ನಲ್ಲೂ ಬರುತ್ತದೆ. 'ಜೂಲಿಯಸ್ ಸೀಸರ್' ನಾಟಕದಲ್ಲಿ ಬರುವ ಮಾಬ್ ಜನ ಬ್ರೂಟಸ್‌ನ ಮಾತನ್ನು ಕೇಳಿ ಬ್ರೂಟಸ್ ಕೀ ಜಯ್ ಎಂದು ಘೋಷಿಸುತ್ತಾರೆ; ಐದು ನಿಮಿಷಗಳ ನಂತರ ಮಾರ್ಕ್ ಆ್ಯಂಟೋನಿಯ ಮಾತಿಗೆ ಮರುಳಾಗಿ ಬ್ರೂಟಸ್ ಮುರ್ದಾಬಾದ್ ಆ್ಯಂಟನಿ ಜಿಂದಾಬಾದ್ ಎಂದು ಘೋಷಿಸುತ್ತಾರೆ.

ಇದೆಲ್ಲ ನಿಜ ಆದರೂ ಷೇಕ್‌ಸ್ಪಿಯರ್‌ಗೆ ಸಾಮಾನ್ಯ ಜನರಲ್ಲಿ ಪ್ರೀತಿಯಿಲ್ಲವೆಂದಾಗಲಿ ಶ್ರೀಮಂತರು ಅವನ ಪಾಲಿಗೆ ಇಂದ್ರ ಚಂದ್ರ ದೇವೇಂದ್ರರೆಂದಾಗಲಿ ಹೇಳಲಾಗುವುದಿಲ್ಲ. ಅವನು ತನ್ನ ಸುತ್ತ ಇದ್ದ ಪ್ರಪಂಚವನ್ನು ಇದ್ದ ಹಾಗೆ ಚಿತ್ರಿಸಿದ. ಮಾಬ್ ಹುಚ್ಚು ಹುಚ್ಚಾಗಿ ವರ್ತಿಸುತ್ತದೆಯೆಂಬುದು ಆಗ ಎಷ್ಟು ನಿಜವೋ ಇವತ್ತು ಅಷ್ಟೇ ನಿಜ. ಆ ಕಾಲದಲ್ಲಿ ರಾಷ್ಟ್ರದ ಆಗು ಹೋಗುಗಳು ರಾಜ ಮಂಡಲಿಕರನ್ನು ಅವಲಂಬಿಸಿದ್ದವೆಂಬುದೂ ನಿಜ. ಆದರೆ ಷೇಕ್‌ಸ್ಪಿಯರ್ ಅವರ ಅವಗುಣಗಳನ್ನೂ ಕ್ರೌರ್ಯವನ್ನೂ ಮುಚ್ಚಹೋಗುವುದಿಲ್ಲ. ಕೆಲವು ವೇಳೆ ಕೆಳವರ್ಗದ ಜನ ಮಾಂಡಲಿಕರಿಗಿಂತ ಗೌರವಾರ್ಹರಾಗುತ್ತಾರೆ. 'ಕಿಂಗ್‌ಲಿಯರ್' ನಾಟಕದಲ್ಲಿ ಗ್ಲಾಸ್ಟರ್‌ನ ಕಣ್ಣು ಕೀಳುವವನು ಮಾಂಡಲಿಕ ಕಾರ್ನ್‌ವಾಲ್; ಆ ಕ್ರೌರ್ಯವನ್ನು ಎದುರಿಸಿ ಗ್ಲಾಸ್ಟರ್‌ನ ಪರವಾಗಿ ಹೋರಾಡಿ ಪ್ರಾಣತೆತ್ತವನು ಸೇವಕನೊಬ್ಬ! 'ಜೂಲಿಯಸ್ ಸೀಸರ್'ನಲ್ಲಿ ಹಿಂಡು ಜನ ನಿರಪರಾಧಿ ಸಿನ್ನ ಎಂಬುವನನ್ನು ಕೊಲ್ಲುತ್ತಾರೆ ನಿಜ, ಆದರೆ ಆ ದೃಶ್ಯದ ಮುಂದಿನ ದೃಶ್ಯದಲ್ಲೇ ಶ್ರೀಮಂತ ಲೆಪಿಡಸ್ ಮತ್ತು ಆ್ಯಂಟೋನಿ ತಮ್ಮ ಹತ್ತಿರದ ಬಂಧುಗಳನ್ನು ಕೊಲೆಗೆ ಒಪ್ಪಿಸಲು ಸಿದ್ಧರಾಗಿರುವುದು ಕಾಣುತ್ತದೆ. ಮಾರ್ಗರಿಟ್ ರಾಣಿ ಯಾರ್ಕ್ ಮಾಂಡಲಿಕನಿಗೆ ಅವನ ಮಗನ ರಕ್ತದಲ್ಲಿ ನೆನಸಿದ ಕರವಸ್ತ್ರವನ್ನು ಕೊಡುತ್ತಾಳೆ-ಅವನು ಮುಖ ಒರೆಸಿಕೊಳ್ಳಲೆಂದು! ಇದನ್ನೆಲ್ಲ ಚಿತ್ರಿಸಿದ ಕವಿಯನ್ನು ಶ್ರೀಮಂತರ ಹೊಗಳುಭಟ್ಟ ಎನ್ನಲಾದೀತೆ ! ಪುರಾತನ ರೋಮ್‌ನಲ್ಲಿದ್ದ ಪ್ಯಾಟ್ರಿಷಿಯನ್-ಪ್ಲಿಬಿಯನ್ ಮುಖಾಮುಖಿ 'ಕಾರಿಯೆಲೇನಸ್' ನಾಟಕದಲ್ಲಿ ಎದ್ದು ಕಾಣುತ್ತದೆ. ಷೇಕ್‌ಸ್ಪಿಯರ್ ಯಾವ ಪಕ್ಷವನ್ನು ವಹಿಸಿಲ್ಲ. ಎರಡು ವರ್ಗ

ದವರನ್ನು ನಿರ್ದಯವಾದ ಸಮದೃಷ್ಟಿಯಿಂದ ನೋಡಿದ್ದಾನೆ. ಅವನದ್ದು ವಸ್ತು ನಿಷ್ಠಕಲೆ, ರಾಷ್ಟ್ರದ ಪ್ರಗತಿ ಶ್ರೀಮಂತರ ಕೈಯಲ್ಲಿತ್ತೆಂಬುದನ್ನು ಅವನು ಬಲ್ಲ. ಆದರೆ ಶ್ರೀಮಂತರಾದ ಕಾರಣದಿಂದ ಅವರು ದೊಡ್ಡವರು ಎಂಬ ಭ್ರಮೆಯೇನೂ All Is well ನಾಟಕದಲ್ಲಿ ಪಾತ್ರನೊಬ್ಬನ ಬಾಯಿಂದ ಅವನು ಈ ಮಾತನ್ನು ಆಡಿಸಿದ್ದಾನೆ.

From lowest place when virtuous things proeced
The place is dignified by the doer's deed.
ಅಧಮ ತಮ ಸ್ಥಾನದಿಂ ಮೂಡಿ ಬರೆ ಸತ್ಕರ್ಮ
ಸ್ಥಾನ ಕೀವುದು ಘನತೆಯಂ, ಕರ್ತೃವಿನ ಕರ್ಮ

ಅಂದರೆ, ಘನತೆ ಬರುವುದು ಸ್ಥಾನದಿಂದ ಮಾನುಷ್ಯನಿಗಲ್ಲ. ಸತ್ಕರ್ಮದಿಂದ ಸ್ಥಾನಕ್ಕೆ ಗೌರವ ಬರುತ್ತದೆ. ಉದಾಹರಣೆಗಳನ್ನು ಸಾಕುಮಾಡಿ ಮುಖ್ಯವಾದ ಪ್ರಶ್ನೆಯೊಂದನ್ನು ಹಾಕಿಕೊಳ್ಳೋಣ. ''ಜನ ಇಂಥ ಬಗೆಯ ಸಾಮಾಜಿಕ ನಿಲುವನ್ನೇ ತಾಳಬೇಕು'' ಎಂದು ಪಕ್ಷ ವಹಿಸಿ, ಕವಿಯು ಆ ಪಕ್ಷದ ವಿಜಯಕ್ಕೆ ತನ್ನ ಕೃತಿಗಳನ್ನು ವಿನಿಯೋಗಿಸಲು ಮಾಡಬೇಕೆ, ಸಾಹಿತ್ಯ Committed ಆಗಿರುವುದು ಸರಿಯೆ ''ಹಾಗೇ Commit ಆಗದಿರುವ ಸಾಹಿತ್ಯ ನಮಗೆ ಬೇಡ. ಅದು ನಿಜವಾಗಿ ಸಾಹಿತ್ಯವೇ ಅಲ್ಲ'' ಎಂದು ವಾದಿಸಬಹುದೇ? ಒಂದು ಕಡೆ ಷೇಕ್ಸ್‌ಪಿಯರ್‌ನ ಕೃತಿಗಳಲ್ಲಿ ನಾವು ಕಂಡ ವಸ್ತು ನಿಷ್ಠ ಸಾಹಿತ್ಯ; ಮತ್ತೊಂದು ಕಡೆ ಯಾವುದೋ ಒಂದು ಸುಧಾರಣೆಗೆ, ಒಂದು ಸಾಮಾಜಿಕ ಅಥವಾ ರಾಜಕೀಯ ತತ್ವಕ್ಕೆ ತನ್ನನ್ನು ಒಪ್ಪಿಸಿಕೊಳ್ಳುವ 'ಕಮಿಟೆಡ್' ಸಾಹಿತ್ಯ ಇವೆರಡರಲ್ಲಿ ಯಾವುದನ್ನು ಬೆಂಬಲಿಸಬೇಕು? ಸಾಹಿತ್ಯವು ''ಇಗೊ ಜೀವನ ಹೀಗಿದೆ. ಇದರ ಆಧಾರದ ಮೇಲೆ ನೀವು ಯೋಚನೆ ಮಾಡಿ ನಿಮ್ಮ ಸಾಮಾಜಿಕ ನಿಲುವನ್ನು ರೂಪಿಸಿಕೊಳ್ಳಿ'' ಎಂದು ಹೇಳಬೇಕೆ? ಅಥವಾ ''ಇದೇ ಸರಿಯಾದ ನಿಲುವು, ನೀವು ಇದನ್ನೇ ತಾಳಿ'' ಎಂದು ಬೋಧಿಸಬೇಕೆ?

ಆನಂದ ಕೊಡುವುದು, ಬೋಧಿಸುವುದು (Teaching, delighting)— ಇವೆರಡರಲ್ಲಿ ಯಾವುದು ಸಾಹಿತ್ಯದ ಕರ್ತವ್ಯ? ಪಾಶ್ಚಾತ್ಯ ಸಂಪ್ರದಾಯ ಹಿಂದಿನಿಂದ ಆನಂದವನ್ನೇ ಒತ್ತಿ ಹೇಳುತ್ತ ಬಂದಿದೆ, ನಮ್ಮ ಭಾರತದ 'ಕಾಂತಾಸಮ್ಮಿತ' ಕಲ್ಪನೆಯಲ್ಲಿ ಆನಂದದ ಮತ್ತು ಬೋಧನೆಯ ಮಧುರ ಮಿಲನ ಕಾಣುತ್ತದೆ. ಆನಂದವೇ ಸಾಹಿತ್ಯದ ಗುರಿ ಎನ್ನುವವರಲ್ಲಿ ಕೆಲವರು ಸ್ವಲ್ಪ ದೂರ ಮುಂದೆ ಹೋಗಿ 'ಕಲೆಗಾಗಿ ಕಲೆ' ಎನ್ನುತ್ತಾರೆ. ಈ ಥಿಯರಿಯನ್ನು ನಾನು ಚರ್ಚಿಸುವುದಿಲ್ಲ. ಕಲೆ ಇರುವುದು ತನಗಾಗಿ ಮಾತ್ರವಾದರೆ ಅದನ್ನು ಕಟ್ಟಿಕೊಂಡು ನಮಗೆ ಆಗಬೇಕಾದ್ದೇನು?

ಸಾವಿರಾರು ವರ್ಷಗಳಿಂದ ನಡೆದು ಬಂದ ಸಾಮಾಜಿಕ ಅನ್ಯಾಯಗಳನ್ನು ಸರಿಪಡಿಸಲು ನಾವು ಈ ಶತಮಾನದಲ್ಲಿ ಕ್ರಿಯಾತ್ಮಕ ಹೋರಾಟವನ್ನು ನಡೆಸುವುದು ಅನಿವಾರ್ಯವಾಗಿದೆ. ಮೊನ್ನೆ ಮೊನ್ನೆಯವರೆಗೂ ಇದ್ದ ಗುಲಾಮೀ ಪದ್ಧತಿ.

೨೫ ನೇ ಪುಟ ನೋಡಿ

೩ ನೇ ಪುಟದಿಂದ......... **ಒಂದು ಮರದ ಸುತ್ತ**

ನಲ್ಲಿ ದೇವಸ್ಥಾನದಲ್ಲಿ ಕೆಲಸ ಮಾಡುವ ಓರ್ವ ಕಾರ್ಯಕರ್ತರೂ ಇದ್ದರು. ಅರಳೀ ಮರವನ್ನು ಕಡಿಯುವುದಾದರೆ ಅದಕ್ಕೆ ದೇವಸ್ಥಾನದವರ ಅನುಮತಿ ಬೇಕೆಂದೂ ಮತ್ತು ಅದನ್ನು ಕಡಿಯುವುದಾದರೆ ಧಾರ್ಮಿಕ ನಿಯಮಾ ಅನುಸಾರವಾಗಿ ಕಡಿಯ ಬೇಕಾಗುತ್ತದೆಂದೂ ತಮ್ಮ ಅಭಿಪ್ರಾಯವನ್ನು ತಿಳಿಸಿದರು. ಆಗ ತಕ್ಷಣ ಗುಂಪಿ ನಲ್ಲಿದ್ದ ಒಬ್ಬರು, "ಬ್ರಾಹ್ಮಣರು ಮರ ಕಡಿಯುವುದಾದರೆ ಅದಕ್ಕೆ ಯಾವ ಧಾರ್ಮಿಕ ವಿಧಿ ಬೇಕಾಗಿಲ್ಲ, ಬ್ರಾಹ್ಮಣೇತರರು ಮರ ಕಡಿಯುವುದಾದರೆ ಇದೆಲ್ಲಾ ಬೇಕು" ಎಂದು ಹೇಳಿ ಅಲ್ಲಿಯ ವಿವಾದಕ್ಕೆ ಜಾತೀಯ ಆಯಾಮವನ್ನು ತಂದುಕೊಟ್ಟರು. ಹೀಗೆ ಊರಿನ ಸಾಮಾನ್ಯರು, ಅಸಾಮಾನ್ಯರು, ಅಧಿಕಾರಿಗಳು. ಜನತಾ ಪ್ರತಿನಿಧಿ ಗಳು ಸೇರಿ ಬಿಸಿ ವಾತಾವರಣದಲ್ಲಿ ಚರ್ಚಿಸುತ್ತಿದ್ದಾಗ ಅಲ್ಲಿ ನಿಂತಿದ್ದ ಅರಳೀ ಮರವು ತನ್ನ ಹೊಟ್ಟೆಯಲ್ಲಿಯ ಪಕ್ಷಿ ಸಂಕುಲದ ಜೊತೆಗೆ ತನ್ನ ಇರುವಿಕೆಯ ಭವಿಷ್ಯದ ಬಗ್ಗೆ ಚಿಂತಾಕ್ರಾಂತವಾಗಿರುವಂತೆ ಕಂಡಿತು. ಆ ಅರಳೀಮರಕ್ಕೆ ತನ್ನದೇ ಆದ ಅಭಿಪ್ರಾಯ ಇರಬಹುದೆಂಬ ವಿಚಾರ ಈ ಮಾನವರಿಗೆ ಎಂದು ಹೊಳೆಯುವುದೋ? ★

---

೭ ನೇ ಪುಟದಿಂದ......... **ಆಡಳಿತದ ಕೆಲಸ**

ದೀರ್ಘಕಾಲ ಯೋಜನೆಗಳಿಂದ ವೃದ್ಧಿ ಮಾಡಬೇಕು. ಎರಡನೆ ಬಗೆಯ ಅಡವಿ ಗಳನ್ನು ಜನರ ಉಪಯೋಗಕ್ಕೆ ಉಚಿತವಾಗಿಯೋ, ಅತಿ ಸುಲಭದರಲ್ಲಿಯೋ ಕೊಡ ಬೇಕು. ತಾಳೆಬೆಲ್ಲ, ಕೈಕಾಗದ, ಮಣ್ಣಿನ ಪಾತ್ರೆ ಇತ್ಯಾದಿ ಗ್ರಾಮೋದ್ಯೋಗಗಳಿಗೆ ಬಹಳ ಸುಲಭ ದರದಲ್ಲಿ ಸೌದೆ–ಹುಲ್ಲು ದೊರೆತರೆ ಅಳಿಯಬಲ್ಲವು. ಇಲ್ಲದಿದ್ದರೆ ಇಲ್ಲ.

ಶಿಕ್ಷಣ ಕೇಂದ್ರಗಳು : ಅಲ್ಲಲ್ಲಿ ಭಾಷೆಯ ಪ್ರಕಾರ ಶಿಕ್ಷಣ ಕೇಂದ್ರಗಳಾಗಬೇಕು. ಅಲ್ಲಿ:

೧. ಜಿಲ್ಲಾ ಪ್ರಯೋಗ–ಪ್ರದರ್ಶನ ಕೇಂದ್ರಗಳ ಸಹಕಾರದಿಂದ ಪ್ರಾಂತದ ಗ್ರಾಮೋದ್ಯೋಗಗಳಿಗೆ ಅಗತ್ಯವಾದ ಕ್ರಮ–ವಿಧಾನಗಳ ಸಂಶೋಧನೆ ನಡೆಯಬೇಕು.

೨. ಗ್ರಾಮೋದ್ಯೋಗಗಳ ಬಗ್ಗೆ ಪ್ರಾಂತೀಯ ಭಾಷೆಗಳಲ್ಲಿ ಪುಸ್ತಕಗಳನ್ನು ಒದಗಿಸಬೇಕು.

೩. ಗ್ರಾಮೋದ್ಯೋಗ ಪ್ರದರ್ಶನಗಳನ್ನು ನಡೆಸಬೇಕು.

೪. ಭತ್ತ ಸುಲಿಯುವ ಕಲ್ಲು, ಎತ್ತು ತಿರುವುವ ಹಿಟ್ಟು ಬೀಸುವ ಕಲ್ಲು, ಚಿಕ್ಕ ಸಕ್ಕರೆ ಯಂತ್ರ, ಮೂಳೆ ಪುಡಿ ಮಾಡುವ ಯಂತ್ರ ಇತ್ಯಾದಿ ಉಪಕರಣಗಳನ್ನು ಒದಗಿಸುವ ಕರ್ಮಾಲಯ ಅಥವಾ ಉದ್ಯೋಗ ಮಂದಿರ ನಡೆಯಬೇಕು.

೫. ಜಿಲ್ಲಾ ಪ್ರದರ್ಶನ ಕೇಂದ್ರಗಳಿಗೆ, ಸಹಕಾರ ಸಂಘಗಳಿಗೆ ಕೆಲಸ ಗಾರರನ್ನು, ಗ್ರಾಮಸೇವಕರನ್ನು ತರಬೇತು ಮಾಡಬೇಕು.

೮ ನೇ ಪುಟದಿಂದ........ **ಐನ್‌ಸ್ಟೀನರ ಎರಡು ಪತ್ರಗಳು**

ಬುದ್ಧಿ ಪ್ರಧಾನ ಮನೋಧರ್ಮಕ್ಕೆ ಒತ್ತಾಸೆ ಕೊಟ್ಟು, ವ್ಯಾವಹಾರಿಕ ಮತ್ತು ಭೌತಿಕ ಮೇಲ್ಮೆಯ ಕಡೆಗೇ ನಿರ್ದೇಶಿಸುವ ಶಿಕ್ಷಣದಿಂದ ನಮ್ಮ ನೈತಿಕ ಮೌಲ್ಯಗಳಿಗೆ ವಿಪರೀತ ಹಾನಿಯಾಗಿದೆ. ತಾಂತ್ರಿಕ ಪ್ರಗತಿಯಿಂದ ಮಾನವಕುಲಕ್ಕಾಗಿರುವ ಅಪಾಯಗಳು ಹೇರಳವಾಗಿವೆ. ಅದಕ್ಕಿಂತ ಹೆಚ್ಚಾಗಿ ಕೇವಲ ವ್ಯಾವಹಾರಿಕ ಲಾಭದ ಬುದ್ಧಿ ನಮ್ಮ ಮಧ್ಯಮಾನವೀಯ ಬಾಂಧವ್ಯಗಳನ್ನೆಲ್ಲ ಕಡಿದು ಹಾಕಿ ನಮ್ಮ ಹೃದಯವಂತಿಕೆಯನ್ನೇ ನಾಶಮಾಡುವ ಮಾರಕ ಮಂಜುಗೆಡ್ಡೆಯಂತೆ ಕುಳಿತು ಬಿಟ್ಟಿದೆ.

ನೈತಿಕ ಮತ್ತು ಸಾಂಸ್ಕೃತಿಕ ಪೂರೈಕೆ ಎಂದಿಗೂ ವಿಜ್ಞಾನದಿಂದ ಆಗದು; ಅದು ಕಲಾಶಾಸ್ತ್ರಗಳಿಗೆ ಸೇರಿದ ಕ್ಷೇತ್ರ. ಪರಸ್ಪರರನ್ನು ಅರಿತುಕೊಳ್ಳುವುದಷ್ಟೇ ಅಲ್ಲ ಒಡನಾಡಿಗಳ ಸಹಜೀವಿಗಳ ದುಃಖ ಸಂತೋಷಗಳಿಗೆ ಸಹಜವಾಗಿ ಸ್ಪಂದಿಸಿದಾಗ ಮಾತ್ರ ಆ ಅರಿವು ಫಲಪ್ರದವಾದೀತು. ಈ ನೈತಿಕತೆಯ ಚಿಲುಮೆ ಇರುವುದು ನಿಜವಾದ ಧರ್ಮ ಪ್ರಜ್ಞೆಯಲ್ಲಿ: ಕುರುಡು ನಂಬಿಕೆಗಳಿಲ್ಲದ ಧಾರ್ಮಿಕ ಮನೋ ವೃತ್ತಿಯಲ್ಲಿ; ಈ ದೃಷ್ಟಿಯಿಂದ ನೀತಿ ಧರ್ಮದ ಬೋಧೆ ಶಿಕ್ಷಣದ ಮುಖ್ಯ ಅಂಗ ಅದು ಕೇವಲ ಕೋರಿಕೆಗಾಗಿ ಮಾಡುವ ಅಭ್ಯಾಸವಾಗದೆ ವ್ಯವಸ್ಥಿತ ಶಿಕ್ಷಣವಾಗಬೇಕು.

ಈ ಬಹುಮುಖ್ಯ ಶಿಕ್ಷಣ ದೊರೆಯದೇ ಇರುವುದರಿಂದ ನಮ್ಮ ರಾಜಕೀಯ ಪರಿಸ್ಥಿತಿ ಈಗ ಇಷ್ಟು ಭಯಂಕರ ಗೊಂದಲಕ್ಕೀಡಾಗಿದೆ. ನೈತಿಕ ಶಿಕ್ಷಣವಿಲ್ಲದೆ ಹೋದಲ್ಲಿ ಮಾನವ ಕುಲಕ್ಕೆ ಮುಕ್ತಿಯೇ ಇರುವುದಿಲ್ಲ".

---

೧೧ ನೇ ಪುಟದಿಂದ .... **ಗಂಗಾ ಕಾವೇರಿ ಯೋಜನೆ ಒಂದು ಮನವಿ**

ಕೆಳಕಂಡ ಸಾಹಿತಿ, ಸಮಾಜ ಸೇವಾ ಕಾರ್ಯಕರ್ತರನ್ನೊಳಗೊಂಡಂತೆ ತಾತ್ಕಾಲಿಕವಾಗಿ ರಚಿಸಿಕೊಳ್ಳಲಾಗಿದೆ. ಪ್ರೊ॥ ಜಿ. ಎಸ್. ಶಿವರುದ್ರಪ್ಪ, ಪಿ. ಲಂಕೇಶ್, ಕೆ. ಪಿ. ಪೂರ್ಣಚಂದ್ರತೇಜಸ್ವಿ, ದೇವನೂರು ಮಹಾದೇವ, ಪ್ರೊ॥ ಎಚ್. ಎಲ್. ಕೇಶವ ಮೂರ್ತಿ, ಡಾ॥ ಬಿ. ಚಂದ್ರಶೇಖರ್, ಕೆ. ಜಿ. ಎಸ್. ಪ್ರಸನ್ನ, ಎಸ್. ಈಶ್ವರ್, ಪ್ರೊ॥ ಸಂಜೀವಯ್ಯ, ಕೆ. ರಾಮದಾಸ್, ಎಸ್. ಅರ್ಜುನದೇವ, ಪ್ರೊ॥ ರವಿವರ್ಮ ಕುಮಾರ್, ಡಾ॥ ಎ. ಸಿ. ಮುನಿವೆಂಕಟೇಗೌಡ, ಕಡಿದಾಳ ಶಾಮಣ, ಸುರೇಂದ್ರ ಕೌಲಗಿ, ಪ್ರೊ॥ ರಾಮೇಶ್ವರಿ ವರ್ಮಾ, ಡಾ॥ ರಾಮಲಿಂಗಯ್ಯ, ಶಬೀರ್ ಮೊಹಮದ್ ಮುಸ್ತಾಫಾ ಮತ್ತು ರಾಜಶೇಖರ ಕೋಟಿ.

(ಪ್ರಧಾನ ಮಂತ್ರಿ ಶ್ರೀ ಚಂದ್ರಶೇಖರ್ ಅವರಿಗೆ ಜ. ೧೮, ೧೯೯೧ ರಂದು ಗಂಗಾ ಕಾವೇರಿ ಸಾಧನಾ ಸಮಿತಿ (ಕರ್ನಾಟಕ) ಅರ್ಪಿಸಿದ ಮನವಿಯ ಸಾರಾಂಶ)

ವಿಳಾಸ : ಗಂಗಾ ಕಾವೇರಿ ಸಾಧನಾ ಸಮಿತಿ (ಕರ್ನಾಟಕ)

ನಂ, ೧೨, ಪಂಪ್‌ಹೌಸ್ ಎದುರು ಮಂಡ್ಯ, ೫೭೧ ೪೦೧, ಕರ್ನಾಟಕ.

ಒಂದು ರಾಷ್ಟ್ರ ಮತ್ತೊಂದನ್ನು ಜಯಿಸಿ ಚಕ್ರಾಧಿಪತ್ಯ ಕಟ್ಟುವುದು; ಅಥವಾ ಆರ್ಥಿಕ ಚಾಕಚಕ್ಯವನ್ನು ಬಳಸಿ ರಾಷ್ಟ್ರವನ್ನು ಶೋಷಿಸುವುದು; ಶ್ರೀಮಂತರಿಂದ ಬಡವರ ಶೋಷಣೆ, ಜಾತಿಮತಗಳಿಗೂ ವರ್ಣಕ್ಕೂ ಸಂಬಂಧಪಟ್ಟ ಮೇಲು ಕೀಳು ಭಾವನೆ; ಹೆಂಗಸರಿಗೆ ಸ್ವಾತಂತ್ರ್ಯ ಸಲ್ಲದು ಎಂಬ ಭಾವನೆ ಇಂಥ ಅನ್ಯಾಯಗಳಿಗೆ ವಿರುದ್ಧವಾದ ಜನಾಭಿಪ್ರಾಯ ಈಗ ರೂಪಗೊಂಡಿದೆ. ಆ ಅಭಿಪ್ರಾಯವನ್ನು ಬೆಳೆಸುವುದರಲ್ಲಿ ಸಾಹಿತ್ಯವೂ ಪಾತ್ರವಹಿಸಿದೆ; ಇನ್ನು ಮುಂದೂ ವಹಿಸಬೇಕಾಗಿದೆ. ಇದಕ್ಕೆ ಸಂಬಂಧ ಪಟ್ಟಂತೆ ನನಗೆ ತೋರುವ ಕೆಲವು ಆಲೋಚನೆಗಳನ್ನು ತಮ್ಮ ಮುಂದೆ ನಿವೇದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

೧. ಸಾಮಾಜಿಕ ಸಮಸ್ಯೆಗಳಿಗೆ ಸಾಹಿತ್ಯ ಗಮನ ಕೊಟ್ಟೇ ತೀರಬೇಕು. ಕೊಡದಿದ್ದರೆ ಅವನ ಸಾಹಿತ್ಯದಲ್ಲಿನ ಜೀವನ ದರ್ಶನ ಅಪೂರ್ಣವಾಗುತ್ತದೆ. ಬದುಕಿನ ಬಹು ಮುಖ್ಯವಾದ ಭಾಗವೊಂದನ್ನು ಅವನು ಕಡೆಗಣಿಸಿದಂತಾಗುತ್ತದೆ. ದೈವ ಭಕ್ತಿ, ಪ್ರಕೃತಿ ಸೌಂದರ್ಯ, ಗಂಡು ಹೆಣ್ಣಿನ,—ಇವುಗಳಿಗೆ ಮಾತ್ರ ಮೀಸಲಾದರೆ ಸಾಹಿತ್ಯ ದಂತ ಗೋಪುರದಲ್ಲಿ ಸೆರೆಯಾದಂತಾಗುತ್ತದೆ.

೨. ಆದರೆ ಪ್ರಕೃತಿ ವರ್ಣನೆ ಇತ್ಯಾದಿಗಳನ್ನು ಕುರಿತ ಸಾಹಿತ್ಯ ಸಾಹಿತ್ಯವೆ ಅಲ್ಲ, ಅದು ನಮಗೆ ಬೇಡವೇ ಬೇಡ ಎಂದು ವಾದಿಸುವುದು ಸರಿಯಲ್ಲ. ಆ ಸಾಹಿತ್ಯಕ್ಕೆ ವ್ಯಾಪ್ತಿ ಸಾಲದು, ಅದು ತನ್ನ ಕರ್ತವ್ಯದ ವಿಷಯದಲ್ಲಿ ಸಂಕುಚಿತ ಭಾವನೆಯನ್ನು ತಾಳಿದೆ ಎಂದು ಆಕ್ಷೇಪಿಸಬಹುದೇ ಹೊರತು ಅದನ್ನು ತಿರಸ್ಕರಿಸುವುದು ಸರಿಯಲ್ಲ. ನಮಗೆ ಆ ಬಗೆಯ ಸಾಹಿತ್ಯವೂ ಬೇಕು. ಅಲ್ಲದೆ ಕೆಲವರಿಗೆ ಸಾಮಾಜಿಕ ಸಮಸ್ಯೆಗಳು ರುಚಿಸದಿರಬಹುದು, ಆದರೆ ಪ್ರಕೃತಿ ಸಾಹಿತ್ಯವನ್ನು ರಚಿಸುವ ಬಯಕೆಯೂ ರಚಿಸುವ ಶಕ್ತಿಯೂ ಇರಬಹುದು. ಅಂಥವರು ತಮ್ಮ ಕ್ಷೇತ್ರದಲ್ಲಿ ದುಡಿಯಲಿ, ಅವರ ಶಕ್ತಿ ಏಕೆ ವ್ಯರ್ಥವಾಗಬೇಕು! ಅವರ ಕೊಡುಗೆ ನಮಗೆ ಸಾಲದಾಗಬಹುದು. ಆದರೆ ಅದರಲ್ಲಿ ಸಾಹಿತ್ಯ ಗುಣ ಚೆನ್ನಾಗಿದ್ದರೆ ಅದನ್ನು ಸ್ವಾಗತಿಸೋಣ. ಸದಾ ಸಾಮಾಜಿಕ ಸಮಸ್ಯೆಗಳನ್ನೇ ಕುರಿತ ಸಾಹಿತ್ಯವನ್ನೇ ಸದಾ ಓದಬೇಕಾದರೆ ಅದೂ ಬೇಸರ ತರಬಹುದು.

೩. ಪುರಾತನ ವೀರಕಾವ್ಯಗಳು ಈಗ ಪ್ರಸಕ್ತವೇ ಅಲ್ಲ ಎಂಬ ನಿಲುವು ಇಂದಿನ ವಾತಾವರಣದಲ್ಲಿ ಸ್ವಾಭಾವಿಕ. ಆದರೆ ಪೂರ್ಣ ಸತ್ಯವಲ್ಲ. ಇಂದಿನ ಬದುಕಿನ ಸಮಸ್ಯೆಗಳನ್ನು ಅವು ಗಣನೆಗೆ ತಂದುಕೊಂಡಿಲ್ಲ, ನಿಜ ಆದರೆ ಮಾನವನ ಒಳಪ್ರವೃತ್ತಿಗೆ ಅವು ಕೊಡುವ ಅಭಿವ್ಯಕ್ತಿ ಇಂದಿಗೂ ಪ್ರಸಕ್ತವೇ. ಸಾಮಾಜಿಕ ಸಮಸ್ಯೆಗಳನ್ನು ಕುರಿತಂತೆ ಅವು ಕೊಡುವ ಅಭಿಪ್ರಾಯಗಳಿಗೆ ನಾವು ಮನ್ನಣೆ ಕೊಡಬೇಕಾದ್ದಿಲ್ಲ; ಅವು ಹೇಳುವುದೆಲ್ಲ ವೇದ ವಾಕ್ಯ ಎಂದು ನಂಬಬೇಕಾಗಿಲ್ಲ. ೪. ಬರವಣಿಗೆ ಪ್ರಗತಿಶೀಲವಾದ ಮಾತ್ರಕ್ಕೆ ನವ್ಯವಾದ ಮಾತ್ರಕ್ಕೆ, ಬಂಡಾಯವಾದ ಮಾತ್ರಕ್ಕೆ ಅದು ಸಾಹಿತ್ಯವಾಯಿತು ಎನ್ನಲಾಗುವುದಿಲ್ಲ. ಅದು ವಿಚಾರಾತ್ಮಕವಾಗಿರುವಂತೆ ಕಲಾತ್ಮಕವೂ ಆಗಿರಬೇಕು. ಸಾಹಿತ್ಯ ಎಂದು ಹೆಸರು ಅದಕ್ಕೆ ಸಲ್ಲಬೇಕಾದರೆ. ೫. ಸೃಜನಶೀಲ ಸಾಹಿತ್ಯ

ಸಮಾಜದ ಪ್ರಗತಿಯನ್ನು ಸಾಧಿಸುವುದಕ್ಕೆ ನೆರವಾಗಬೇಕು, ಶ್ರಮಿಸಬೇಕು. ಇದನ್ನು ನಾವು ಆಗಲೇ ಒಪ್ಪಿದ್ದೇವೆ. ಆದರೆ ಸುಧಾರಣೆಗೆ, ಪ್ರಗತಿಗೆ, ಅದೇ ಅತ್ಯುತ್ತಮ ಸಾಧನ ಎಂದರೆ ಒಪ್ಪುವುದು ಕಷ್ಟ. poets are the unacknowledged legislators of the world ಮುಂತಾದ ಉದ್ಗಾರಗಳು ಸಾಹಿತಿಗಳ ಉತ್ಪ್ರೇಕ್ಷೆ ಆ ಮಾತಿನಲ್ಲಿ 'unacknowledged' ಎಂಬುದಷ್ಟೇ ನಿಜ. ನಾನು ೧೩–೧೪ ನೇ ವಯಸ್ಸಿನಲ್ಲಿ ನಂಜನಗೂಡು ಶ್ರೀಕಂಠಶಾಸ್ತ್ರಿಗಳು (?) ಅನುವಾದಿಸಿದ್ದ ಕಂದುಕೂರಿ ವೀರೇಶಲಿಂಗಂ ಪಂತುಲುರವರ ಸಮಾಜ ಸುಧಾರಣಾ ಸಾಹಿತ್ಯವನ್ನು ಓದಿದೆ 'ಯೋಗ ನಿದ್ರಾ ಪ್ರಹಸನ' ಎಂಬುದೊಂದು ಶೀರ್ಷಿಕೆ ಇನ್ನು ನೆನಪಿನಲ್ಲಿ ನಿಂತಿದೆ. ಅವರು ಖಂಡಿಸಿದ್ದ ಕುಂದುಕೊರತೆಗಳೂ ಮೌಢ್ಯವೂ ಎಳೂವರೆ ದಶಕಗಳು ಕಳೆದ ಮೇಲೂ ಧ್ವಜ ಹಾರಿಸುತ್ತಲೇ ಇವೆ. ಕೈಲಾಸಂ 'ತಾಳೀಕಟ್ಟೋಕ್ಕೂಲೀನೇ' ಎಂಬ ನಾಟಕವನ್ನು ಬರೆದು ಎಷ್ಟೋ ದಶಕಗಳು ಕಳೆದಿವೆ. ವರದಕ್ಷಿಣೆಯ ಪದ್ಧತಿ ಈಗಲೂ ಆಗಿದ್ದಷ್ಟೇ ಬಲವಾಗಿದೆ. ನನಗೆ ತಿಳಿದ ಮಟ್ಟಿಗೆ ಇತ್ತೀಚೆಗೆ ಹಳೆಯ ಪ್ರಪಂಚದ ಬುಡವನ್ನೇ ಹಿಡಿದ ಅಲ್ಲಾಡಿಸಿದ ಕ್ರಾಂತಿಗಳು ಎರಡು; ಫ್ರಾನ್ಸಿನ ಮಹಾಕ್ರಾಂತಿ, ಮತ್ತು ಈ ಶತಮಾನದಲ್ಲೇ ರಷ್ಯದಲ್ಲಿ ನಡೆದ ಕ್ರಾಂತಿ ಇವೆರಡರ ಹಿಂದೆ ಪ್ರೇರಕ ಶಕ್ತಿಗಳಾಗಿದ್ದ ರೂಸೊ ಮತ್ತು ಕಾರ್ಲ್‌ಮಾರ್ಕ್ಸ್ ಇಬ್ಬರೂ ಕವನ – ನಾಟಕ ಕಾದಂಬರಿಗಳನ್ನು ಬರೆದವರಲ್ಲ. ಸಾಹಿತಿ ಪ್ರಗತಿಗೆ ನೆರವಾಗಬೇಕು; ಪ್ರಗತಿಯಲ್ಲಿ ಅವನ ಪಾತ್ರ ಇದ್ದೇ ಇದೆ. ಆದರೆ ತನ್ನದೇ ಮುಖ್ಯ ಪಾತ್ರ ಎಂಬ ಭ್ರಮೆಗೆ ಅವನು ಒಳಗಾಗಬಾರದು. ಇತಿಹಾಸದ ನಡೆಗೆ ಆರ್ಥಿಕ ಮತ್ತು ರಾಜಕೀಯ ಪರಿಸ್ಥಿತಿಯಲ್ಲಿ ಆಗುವ ಬದಲಾವಣೆಗಳು–ಇವುಗಳ ಪಾತ್ರವೇ ಹೆಚ್ಚು.

ಜನಪದ ಸೇವಾ ಟ್ರಸ್ಟ್ ಪ್ರಕಟಣೆಗಳು

ಒಂದು ಹುಲ್ಲಿನ ಕ್ರಾಂತಿ

ಪ್ರಾಕೃತಿಕ ವ್ಯವಸಾಯದ ಸಿದ್ಧಾಂತ

ಮೂಲ : ಮಸನೋಬು ಫುಕುವೋಕಾ ಕನ್ನಡಾನುವಾದ : ಸಂತೋಷ್ ಕೌಲಗಿ **ಬೆಲೆ : 15 ರೂ.**

ನುನುಕುಲ ವಿನಾಶ : ಬಾಂಬ್ ಬೇಕಿಲ್ಲ ಅಣುಸ್ಥಾವರ ಸಾಕು

ಡಾ॥ ಎ. ಎನ್. ನಾಗರಾಜ್

ಬೆಲೆ : 2-00 ರೂ.

ಸಹಜ ಕೃಷಿ : ಒಂದು ಪರಿಚಯ

ಲೇಖಕರು : ಪೂರ್ಣಚಂದ್ರ ತೇಜಸ್ವಿ

ಬೆಲೆ : ೬/= ರೂ

ಮಾರಾಟಕ್ಕೆ

ಕಾವ್ಯಸುಧಾ ಎಂ. ಎಸ್. ನರಸಿಂಹಮೂರ್ತಿ

ಬೆಲೆ : 12-00 ರೂ.

ಕಾಂಪೋಸ್ಟ್ ಗೊಬ್ಬರದ ಚಮತ್ಕಾರ

ಬೆಲೆ: 5-00 ರೂ.

KRNM 44

ಜನಪದ ಸೇವಾ ಟ್ರಸ್ಟ್ ಪರವಾಗಿ ಸುರೇಂದ್ರ ಕೌಲಗಿ ಅವರಿಂದ ಮೇಲುಕೋಟೆಯ
ಜನಪದ ಸೇವಾ ಟ್ರಸ್ಟ್ ಮುದ್ರಣಾಲಯದಲ್ಲಿ ಮುದ್ರಿತವಾಗಿ ಪ್ರಕಟಿಸಲ್ಪಟ್ಟಿತು.
ಸಂಪಾದಕರು : ಎಸ್. ಪಟ್ಟಾಭಿರಾಮನ್ ಸಹಾಯಕ ಸಂಪಾದಕರು : ಸುರೇಂದ್ರ ಕೌಲಗಿ